ಓಂ ॥ ದಧಿಕ್ರಾವ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ ।
ಸುರಭಿನೋ ಮುಖಾಕರತ್ಪ್ರಣ ಆಯೂಂಷಿ ತಾರಿಷತ್ ॥

ಘೃತಸ್ನಾನಮ್ (ತುಪ್ಪ) ।

ಓಂ ॥ ಘೃತಂ ಮಿಮಿಕ್ಷೇ ಘೃತಮಸ್ಯ ಯೋನಿಃ ಘೃತೇಶ್ರಿತೋ ಘೃತಮ್ವಸ್ಯಧಾಮ ।
ಅನುಷ್ವಧಾಮಾವಹ ಮಾದಯಸ್ವ ಸ್ವಾಹಾಕೃತಂ ವೃಷಭ ವಕ್ಷಿಹವ್ಯಮ್ ॥

ಮಧುಸ್ನಾನಮ್ (ಜೇನುತುಪ್ಪ) ।

ಓಂ ॥ ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ ।
ಮಾಧ್ವೀರ್ನಃ ಸಂತ್ವೋಷಧೀಃ ॥
ಮಧುನಕ್ತ ಮುತೋಶಸೋ ಮಧುಮತ್ಪಾರ್ಥಿವಂ ರಜಃ ।
ಮಧುದ್ಯೌರಸ್ತುನಃಪಿತಾ ॥
ಮಧುಮಾನ್ನೋ ವನಸ್ಪತಿರ್ಮಧುಮಾಂ ಅಸ್ತು ಸೂರ್ಯಃ ।
ಮಾಧ್ವೀರ್ಗಾವೋ ಭವಂತು ನಃ ॥

ಶರ್ಕರಾಸ್ನಾನಮ್ (ಸಕ್ಕರೆ) ।

ಓಂ ॥ ಸ್ವಾದುಃ ಪವಸ್ವ ದಿವ್ಯಾಯ ಜನ್ಮನೇ ಸ್ವಾದುರಿಂದ್ರಾಯ ಸುಹವೀತುನಾಮ್ನೇ ।
ಸ್ವಾದುರ್ಮಿತ್ರಾಯ ವರುಣಾಯ ವಾಯವೇ ಬೃಹಸ್ಪತಯೇ ಮಧುಮಾಂ
ಅದಾಭ್ಯಃ ॥

ಫಲಸ್ನಾನಮ್ (ಹಣ್ಣು-ಎಳನೀರು) ।

ಓಂ ॥ ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾ ಯಾಶ್ಚ ಪುಷ್ಪಿಣೀಃ ।
ಬೃಹಸ್ಪತಿಃಪ್ರಸೂತಾಸ್ತಾನೋ ಮುಂಚತ್ವಂ ಹಸಃ ॥

ಓಂ ಶ್ರೀಮದನಂತಪದ್ಮನಾಭಾಯ ನಮಃ । ಪಂಚಾಮೃತಸ್ನಾನಂ ಸಮರ್ಪಯಾಮಿ ।
(ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ (ಬೆಲ್ಲ) ಎಳನೀರು (ಕಾಯಿನೀರು)

ಹಣ್ಣು ಇವುಗಳನ್ನು ಹೂವಿಗೆ ಮುಟ್ಟಿಸಿ ಕಲಶಕ್ಕೆ ಪ್ರೋಕ್ಷಣೆ ಮಾಡಿ ಬೆಳ್ಳಿಯ ಲಕ್ಷ್ಮೀನಾರಾಯಣ ವಿಗ್ರಹವಿದ್ದರೆ ಅದಕ್ಕೆ ಅಭಿಷೇಕ ಮಾಡುವುದು)

ಶುದ್ಧೋದಕಸ್ನಾನಮ್ ।

ಕರ್ಪೂರೈಲಾಕುಂಕುಮಾದಿಸುಗಂಧದ್ರವ್ಯಸಂಯುತಮ್ ।
ಗಂಗೋದಕಂ ಮಯಾ ದತ್ತಂ ಸ್ನಾನಾರ್ಥಂ ಪ್ರತಿಗೃಹ್ಯತಾಮ್ ॥

ಓಂ ॥ ಯತ್ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋಽ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ಶುದ್ಧೋದಕಸ್ನಾನಂ ಸಮರ್ಪಯಾಮಿ ।
ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ ।
(ಪುರುಷಸೂಕ್ತ ಮತ್ತು ಶ್ರೀಸೂಕ್ತಗಳಿಂದ ಮಹಾಭಿಷೇಕ ಮಾಡಬೇಕು)

ವಸ್ತ್ರಮ್ ।

ನಮಸ್ತೇ ಜ್ಞಾನರೂಪಾಯ ಜ್ಞಾನಗಮ್ಯಾಯ ತೇ ನಮಃ ।
ಪೀತಾಂಬರಯುಗಂ ದಿವ್ಯಂ ಗೃಹಾಣ ಜ್ಞಾನಿವಲ್ಲಭ ॥

ಓಂ ॥ ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚಯೇ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ವಸ್ತ್ರಯುಗ್ಮಂ ಸಮರ್ಪಯಾಮಿ ।
(ಗೆಜ್ಜೆವಸ್ತ್ರ ಅಥವಾ ವಸ್ತ್ರ ಸಮರ್ಪಿಸಬೇಕು)

ಯಜ್ಞೋಪವೀತಮ್ ।

ಯಜ್ಞೋಪವೀತಂ ಪರಮಂ ಸೌವರ್ಣಂ ಸುಮನೋಹರಮ್ ।
ಗೃಹಾಣಾನಂತ ದೇವೇಶ ಲೋಕಾನುಗ್ರಹವಿಗ್ರಹ ॥

ಓಂ ॥ ತಸ್ಮಾದ್ಯಜ್ಞಾತ್ಸರ್ವಹುತಸ್ಸಭೃತಂ ಪೃಷದಾಜ್ಯಮ್ ।
ಪಶೂಂಸ್ತಾಂಶ್ಚಕ್ರೇ ವಾಯವ್ಯಾನಾರಣ್ಯಾನ್ ಗ್ರಾಮ್ಯಾಶ್ಚ ಯೇ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ಯಜ್ಞೋಪವೀತಂ ಸಮರ್ಪಯಾಮಿ ।
(ಜನಿವಾರವನ್ನು ದೇವರಿಗೆ ಹಾಕಬೇಕು)

ಆಭರಣಮ್ ।

ಹಾರಕಂಕಣಕೇಯೂರಮುದ್ರಿಕಾಕುಂಡಲಾನಿ ಚ ।
ಗೃಹಾಣಾನ್ಯಾನಿ ದಿವ್ಯಾನಿ ಭೂಷಣಾನಿ ರಮಾಪತೇ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ಆಭರಣಾನಿ ಸಮರ್ಪಯಾಮಿ ।
(ದೇವರಿಗೆ ಚಿನ್ನದ ಆಭರಣಗಳನ್ನು (ನಾವು ಧರಿಸಿದ್ದಾದರೆ ತೊಳೆದು) ಸಮರ್ಪಿಸಿರಿ)

ಗಂಧಃ ।

ಚಂದನಾಗರುಕಸ್ತೂರೀಘನಸಾರಸಮನ್ವಿತಮ್ ।
ಗಂಧಂ ಗೃಹಾಣ ಗೋವಿಂದ ಸರ್ವಗಂಧಮನೋಹರ ॥

ಓಂ ॥ ತಸ್ಮಾದ್ಯಜ್ಞಾತ್ಸರ್ವಹುತ ಋಚಸ್ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ಗಂಧಂ ಸಮರ್ಪಯಾಮಿ ।
(ದೇವರಿಗೆ ಪಚ್ಚಕರ್ಪೂರ ಮತ್ತು ಕೇಸರಿಮಿಶ್ರಿತ ಶ್ರೀಗಂಧವನ್ನು ಸಮರ್ಪಿಸಿರಿ)

ಅಕ್ಷತಾಃ ।

ಅಕ್ಷತಾನ್ ಧವಳಾನ್ ಶುದ್ಧಾನ್ ದೃಷ್ಟಿಪ್ರಿಯಕರಾನ್ ಶುಭಾನ್ ।
ರಕ್ತಾಕ್ಷತಾಂಶ್ಚ ದಾಸ್ಯಾಮಿ ಗೃಹಾಣ ಮಧುಸೂದನ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ಅಕ್ಷತಾನ್ ಸಮರ್ಪಯಾಮಿ ।
(ಮಂತ್ರಾಕ್ಷತೆಗಳನ್ನು ಹಾಕಿರಿ)

ಪರಿಮಳದ್ರವ್ಯಾಣಿ ।

ನಾನಾಸುಗಂಧಿತಂ ದ್ರವ್ಯಂ ಚೂರ್ಣೀಕೃತ್ವಾ ಪ್ರಯತ್ನತಃ ।
ದದಾಮಿ ತೇ ನಮಸ್ತುಭ್ಯಂ ಪ್ರೀತ್ಯರ್ಥಂ ಪ್ರತಿಗೃಹ್ಯತಾಮ್ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ಪರಿಮಳದ್ರವ್ಯಾಣಿ ಸಮರ್ಪಯಾಮಿ ।
(ಮಂತ್ರಾಕ್ಷತೆಗಳನ್ನು ಹಾಕಿರಿ)

ಪುಷ್ಪಾಣಿ ।

ಮಾಲತೀಮಲ್ಲಿಕಾಪುಷ್ಪೈಃ ಕೇತಕೀಚಂಪಕಾದಿಭಿಃ ।
ಕಮಲೈಸ್ತುಲಸೀಬಿಲ್ವೈರರ್ಚಯಾಮಿ ರಮಾಪತೇ ॥

ಓಂ ॥ ತಸ್ಮಾದಶ್ವಾ ಅಜಾಯಂತ ಯೇ ಕೇ ಚೋ ಭಯಾದತಃ ।
ಗಾವೋ ಹ ಜಜ್ಞಿರೇ ತಸ್ಮಾತ್ತಸ್ಮಾಜ್ಜಾತಾ ಅಜಾವಯಃ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ । ಪುಷ್ಪಾಣಿ ಸಮರ್ಪಯಾಮಿ ।
(ಹೂಮಾಲೆ ಮತ್ತು ಬಿಡಿ ಹೂಗಳಿಂದ ಅಲಂಕರಿಸುವುದು)

ಅಥ ಅಂಗಪೂಜಾ ।

ಓಂ ಶ್ರೀಮದನಂತಪದ್ಮನಾಭಾಯ ನಮಃ, ಪಾದೌ (ಕಾಲು) ಪೂಜಯಾಮಿ ।
ಓಂ ಸಂಕರ್ಷಣಾಯ ನಮಃ, ಗುಲ್ಫೌ (ಕಾಲಿನ ಗಂಟು) ಪೂಜಯಾಮಿ ।
ಓಂ ವೇದವೇದ್ಯಾಯ ನಮಃ, ಜಂಘೇ (ಮೊಣಕಾಲು) ಪೂಜಯಾಮಿ ।
ಓಂ ಕಾಲಾತ್ಮನೇ ನಮಃ, ಜಾನುನೀ (ಮಂಡಿ) ಪೂಜಯಾಮಿ ।

ಓಂ ತ್ರಿವಿಕ್ರಮಾಯ ನಮಃ, ಊರೂ (ತೊಡೆ) ಪೂಜಯಾಮಿ ।
ಓಂ ವಿಶ್ವರೂಪಾಯ ನಮಃ, ಕಟಿಂ (ಸೊಂಟ) ಪೂಜಯಾಮಿ ।
ಓಂ ವಿಷ್ಣವೇ ನಮಃ, ಗುಹ್ಯಂ (ಗುಹ್ಯ) ಪೂಜಯಾಮಿ ।
ಓಂ ಪದ್ಮನಾಭಾಯ ನಮಃ, ನಾಭಿಂ (ಹೊಕ್ಕಳು) ಪೂಜಯಾಮಿ ।
ಓಂ ಪರಮಾತ್ಮನೇ ನಮಃ, ಹೃದಯಂ (ಹೃದಯ) ಪೂಜಯಾಮಿ ।
ಓಂ ದಾಮೋದರಾಯ ನಮಃ, ಉದರಂ (ಹೊಟ್ಟೆ) ಪೂಜಯಾಮಿ ।
ಓಂ ಶ್ರೀವತ್ಸಲಾಂಛನಾಯ ನಮಃ, ವಕ್ಷಸ್ಥಲಂ (ಎದೆ) ಪೂಜಯಾಮಿ ।
ಓಂ ಸರ್ವಾಸ್ತ್ರಧಾರಿಣೇ ನಮಃ, ಬಾಹೂನ್ (ಬಾಹುಗಳು) ಪೂಜಯಾಮಿ ।
ಓಂ ಶ್ರೀಕಂಠಾಯ ನಮಃ, ಕಂಠಂ (ಕುತ್ತಿಗೆ) ಪೂಜಯಾಮಿ ।
ಓಂ ವಾಚಸ್ಪತಯೇ ನಮಃ, ಮುಖಂ (ವದನ) ಪೂಜಯಾಮಿ ।
ಓಂ ಗೋವಿಂದಾಯ ನಮಃ, ನಾಸಿಕಾಂ (ಮೂಗು) ಪೂಜಯಾಮಿ ।
ಓಂ ಕಪಿಲಾಯ ನಮಃ, ಚಕ್ಷುಷೀ (ಕಣ್ಣು) ಪೂಜಯಾಮಿ ।
ಓಂ ರತ್ನಕುಂಡಲಧರಾಯ ನಮಃ, ಕರ್ಣೌ (ಕಿವಿ) ಪೂಜಯಾಮಿ ।
ಓಂ ಕೇಶವಾಯ ನಮಃ, ಲಲಾಟಂ (ಹಣೆ) ಪೂಜಯಾಮಿ ।
ಓಂ ಹೃಷೀಕೇಶಾಯ ನಮಃ, ಕೇಶಾನ್ (ಕೂದಲು) ಪೂಜಯಾಮಿ ।
ಓಂ ಸಹಸ್ರಶಿರಸೇ ನಮಃ, ಶಿರಃ (ತಲೆ) ಪೂಜಯಾಮಿ ।
ಓಂ ಸರ್ವಾತ್ಮನೇ ನಮಃ, ಸರ್ವಾಣ್ಯಂಗಾನಿ (ಎಲ್ಲ ಅಂಗಗಳು) ಪೂಜಯಾಮಿ ॥

ಅಥ ಕೇಶವಾದಿನಾಮಪೂಜಾ ।

ಓಂ ಕೇಶವಾಯ ನಮಃ ।
ಓಂ ನಾರಾಯಣಾಯ ನಮಃ ।
ಓಂ ಮಾಧವಾಯ ನಮಃ ।
ಓಂ ಗೋವಿಂದಾಯ ನಮಃ ।
ಓಂ ವಿಷ್ಣವೇ ನಮಃ ।
ಓಂ ಮಧುಸೂದನಾಯ ನಮಃ ।
ಓಂ ತ್ರಿವಿಕ್ರಮಾಯ ನಮಃ ।
ಓಂ ವಾಮನಾಯ ನಮಃ ।
ಓಂ ಶ್ರೀಧರಾಯ ನಮಃ ।
ಓಂ ಹೃಷೀಕೇಶಾಯ ನಮಃ ।
ಓಂ ಪದ್ಮನಾಭಾಯ ನಮಃ ।
ಓಂ ದಾಮೋದರಾಯ ನಮಃ ।
ಓಂ ಸಂಕರ್ಷಣಾಯ ನಮಃ ।
ಓಂ ವಾಸುದೇವಾಯ ನಮಃ ।
ಓಂ ಪ್ರದ್ಯುಮ್ನಾಯ ನಮಃ ।
ಓಂ ಅನಿರುದ್ಧಾಯ ನಮಃ ।
ಓಂ ಪುರುಷೋತ್ತಮಾಯ ನಮಃ ।
ಓಂ ಅಧೋಕ್ಷಜಾಯ ನಮಃ ।
ಓಂ ನಾರಸಿಂಹಾಯ ನಮಃ ।
ಓಂ ಅಚ್ಯುತಾಯ ನಮಃ ।
ಓಂ ಜನಾರ್ದನಾಯ ನಮಃ ।
ಓಂ ಉಪೇಂದ್ರಾಯ ನಮಃ ।
ಓಂ ಹರಯೇ ನಮಃ ।
ಓಂ ಶ್ರೀಕೃಷ್ಣಾಯ ನಮಃ ।

ಓಂ ಮತ್ಸ್ಯಾಯ ನಮಃ ।
ಓಂ ಕೂರ್ಮಾಯ ನಮಃ
ಓಂ ವರಾಹಾಯ ನಮಃ ।
ಓಂ ನೃಸಿಂಹಾಯ ನಮಃ ।
ಓಂ ವಾಮನಾಯ ನಮಃ ।
ಓಂ ಭಾರ್ಗವಾಯ ನಮಃ ।
ಓಂ ರಾಮಾಯ ನಮಃ ।
ಓಂ ಕೃಷ್ಣಾಯ ನಮಃ ।
ಓಂ ಬುದ್ಧಾಯ ನಮಃ ।
ಓಂ ಕಲ್ಕಿನೇ ನಮಃ ।
ಓಂ ಶ್ರೀಮದನಂತಪದ್ಮನಾಭಾಯ ನಮಃ । ನಾಮಪೂಜಾಂ ಸಮರ್ಪಯಾಮಿ ।

ಅಥ ಗ್ರಂಥಿಪೂಜಾ ।

ಓಂ ಅನಂತಾಯ ನಮಃ, ಪ್ರಥಮಗ್ರಂಥಿಂ ಪೂಜಯಾಮಿ ।
ಓಂ ನಾರಸಿಂಹಾಯ ನಮಃ, ದ್ವಿತೀಯಗ್ರಂಥಿಂ ಪೂಜಯಾಮಿ ।
ಓಂ ವಿಷ್ಣವೇ ನಮಃ, ತೃತೀಯಗ್ರಂಥಿಂ ಪೂಜಯಾಮಿ ।
ಓಂ ಕೃಷ್ಣಾಯ ನಮಃ, ಚತುರ್ಥಗ್ರಂಥಿಂ ಪೂಜಯಾಮಿ ।
ಓಂ ಹರಯೇ ನಮಃ, ಪಂಚಮಗ್ರಂಥಿಂ ಪೂಜಯಾಮಿ ।
ಓಂ ಶಿವಾಯ ನಮಃ, ಷಷ್ಠಗ್ರಂಥಿಂ ಪೂಜಯಾಮಿ ।
ಓಂ ಬ್ರಹ್ಮಣೇ ನಮಃ, ಸಪ್ತಮಗ್ರಂಥಿಂ ಪೂಜಯಾಮಿ ।
ಓಂ ಭಾಸ್ಕರಾಯ ನಮಃ, ಅಷ್ಟಮಗ್ರಂಥಿಂ ಪೂಜಯಾಮಿ ।
ಓಂ ಶೇಷಾಯ ನಮಃ, ನವಮಗ್ರಂಥಿಂ ಪೂಜಯಾಮಿ ।
ಓಂ ಸರ್ವವ್ಯಾಪಿನೇ ನಮಃ, ದಶಮಗ್ರಂಥಿಂ ಪೂಜಯಾಮಿ ।
ಓಂ ಈಶ್ವರಾಯ ನಮಃ, ಏಕಾದಶಗ್ರಂಥಿಂ ಪೂಜಯಾಮಿ ।
ಓಂ ವಿಶ್ವರೂಪಾಯ ನಮಃ, ದ್ವಾದಶಗ್ರಂಥಿಂ ಪೂಜಯಾಮಿ ।
ಓಂ ಮಹಾಕಾಯಾಯ ನಮಃ, ತ್ರಯೋದಶಗ್ರಂಥಿಂ ಪೂಜಯಾಮಿ ।
ಓಂ ಸೃಷ್ಟಿಸ್ಥಿತ್ಯಂತಕಾರಕಾಯ ನಮಃ, ಚತುರ್ದಶಗ್ರಂಥಿಂ ಪೂಜಯಾಮಿ ।

ಆವರಣಪೂಜಾ ।

1. ಓಂ ಪರಮಪುರುಷಾಯ ನಮಃ ।
2. ಓಂ ಲಕ್ಷ್ಮ್ಯೈ ನಮಃ ।
3. ಓಂ ಧರಾಯೈ ನಮಃ ।
4. ಓಂ ಕೃದ್ಧೋಲ್ಕಾಯ ನಮಃ ।
5. ಓಂ ಮಹೋಲ್ಕಾಯ ನಮಃ ।
6. ಓಂ ವೀರೋಲ್ಕಾಯ ನಮಃ ।
7. ಓಂ ದ್ಯುಲ್ಕಾಯ ನಮಃ ।
8. ಓಂ ಸಹಸ್ರೋಲ್ಕಾಯ ನಮಃ ।

॥ ಪ್ರಥಮಾವರಣಪೂಜಾಂ ಸಮರ್ಪಯಾಮಿ ॥

9. ಓಂ ವಾಸುದೇವಾಯ ನಮಃ ।
10. ಓಂ ಮಾಯಾಯೈ ನಮಃ ।
11. ಓಂ ಸಂಕರ್ಷಣಾಯ ನಮಃ ।
12. ಓಂ ಜಯಾಯೈ ನಮಃ ।
13. ಓಂ ಪ್ರದ್ಯುಮ್ನಾಯ ನಮಃ ।
14. ಓಂ ಕೃತ್ಯೈ ನಮಃ ।

15. ಓಂ ಅನಿರುದ್ಧಾಯ ನಮಃ ।
16. ಓಂ ಶಾಂತ್ಯೈ ನಮಃ ।
17. ಓಂ ವಿಶ್ವಾಯ ನಮಃ ।
18. ಓಂ ತೈಜಸಾಯ ನಮಃ ।
19. ಓಂ ಪ್ರಾಜ್ಞಾಯ ನಮಃ ।
20. ಓಂ ತುರ್ಯಾಯ ನಮಃ ।

॥ ದ್ವಿತೀಯಾವರಣಪೂಜಾಂ ಸಮರ್ಪಯಾಮಿ ॥

21. ಓಂ ಕೇಶವಾಯ ನಮಃ ।
22. ಓಂ ನಾರಾಯಣಾಯ ನಮಃ ।
23. ಓಂ ಮಾಧವಾಯ ನಮಃ ।
24. ಓಂ ಗೋವಿಂದಾಯ ನಮಃ ।
25. ಓಂ ವಿಷ್ಣವೇ ನಮಃ ।
26. ಓಂ ಮಧುಸೂದನಾಯ ನಮಃ ।
27. ಓಂ ತ್ರಿವಿಕ್ರಮಾಯ ನಮಃ ।
28. ಓಂ ವಾಮನಾಯ ನಮಃ ।
29. ಓಂ ಶ್ರೀಧರಾಯ ನಮಃ ।
30. ಓಂ ಹೃಷೀಕೇಶಾಯ ನಮಃ ।
31. ಓಂ ಪದ್ಮನಾಭಾಯ ನಮಃ ।
32. ಓಂ ದಾಮೋದರಾಯ ನಮಃ ।

॥ ತೃತೀಯಾವರಣಪೂಜಾಂ ಸಮರ್ಪಯಾಮಿ ॥

33. ಓಂ ಸಂಕರ್ಷಣಾಯ ನಮಃ ।
34. ಓಂ ವಾಸುದೇವಾಯ ನಮಃ ।
35. ಓಂ ಪ್ರದ್ಯುಮ್ನಾಯ ನಮಃ ।
36. ಓಂ ಅನಿರುದ್ಧಾಯ ನಮಃ ।
37. ಓಂ ಪುರುಷೋತ್ತಮಾಯ ನಮಃ ।
38. ಓಂ ಅಧೋಕ್ಷಜಾಯ ನಮಃ ।
39. ಓಂ ನಾರಸಿಂಹಾಯ ನಮಃ ।
40. ಓಂ ಅಚ್ಯುತಾಯ ನಮಃ ।
41. ಓಂ ಜನಾರ್ದನಾಯ ನಮಃ ।
42. ಓಂ ಉಪೇಂದ್ರಾಯ ನಮಃ ।
43. ಓಂ ಹರಯೇ ನಮಃ ।
44. ಓಂ ಶ್ರೀಕೃಷ್ಣಾಯ ನಮಃ ।

॥ ಚತುರ್ಥಾವರಣಪೂಜಾಂ ಸಮರ್ಪಯಾಮಿ ॥

45. ಓಂ ಮತ್ಸ್ಯಾಯ ನಮಃ ।
46. ಓಂ ಕೂರ್ಮಾಯ ನಮಃ ।
47. ಓಂ ವರಾಹಾಯ ನಮಃ ।
48. ಓಂ ನೃಸಿಂಹಾಯ ನಮಃ ।
49. ಓಂ ವಾಮನಾಯ ನಮಃ ।
50. ಓಂ ಭಾರ್ಗವಾಯ ನಮಃ ।
51. ಓಂ ರಾಮಾಯ ನಮಃ ।
52. ಓಂ ಕೃಷ್ಣಾಯ ನಮಃ ।
53. ಓಂ ಬುದ್ಧಾಯ ನಮಃ ।
54. ಓಂ ಕಲ್ಕಿನೇ ನಮಃ ।

॥ ಪಂಚಮಾವರಣಪೂಜಾಂ ಸಮರ್ಪಯಾಮಿ ॥

55. ಓಂ ಅನಂತಾಯ ನಮಃ ।
56. ಓಂ ಬ್ರಹ್ಮಣೇ ನಮಃ ।
57. ಓಂ ವಾಯವೇ ನಮಃ ।
58. ಓಂ ಈಶಾನಾಯ ನಮಃ ।
59. ಓಂ ಗರುಡಾಯ ನಮಃ ।
60. ಓಂ ವಾರುಣ್ಯೈ ನಮಃ ।
61. ಓಂ ಗಾಯತ್ರ್ಯೈ ನಮಃ ।
62. ಓಂ ಭಾರತ್ಯೈ ನಮಃ ।
63. ಓಂ ಗಿರಿಜಾಯೈ ನಮಃ ।
64. ಓಂ ಸೌಪರ್ಣ್ಯೈ ನಮಃ ।

॥ ಷಷ್ಠಾವರಣಪೂಜಾಂ ಸಮರ್ಪಯಾಮಿ ॥

ಓಂ ಇಂದ್ರಾಯ ಸುರಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ಅಗ್ನಯೇ ತೇಜೋಽಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ಯಮಾಯ ಪ್ರೇತಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ನಿರ್ಋತಯೇ ರಕ್ಷೋಽಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ವರುಣಾಯ ಜಲಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ವಾಯವೇ ಪ್ರಾಣಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ಸೋಮಾಯ ನಕ್ಷತ್ರಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ಈಶಾನಾಯ ವಿದ್ಯಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ಅನಂತಾಯ ನಾಗಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

ಓಂ ಬ್ರಹ್ಮಣೇ ಸತ್ಯಲೋಕಾಧಿಪತಯೇ ಸಭಾರ್ಯಾಯ, ಸಾಯುಧಾಯ, ಸವಾಹನಾಯ, ಸಪರಿಗ್ರಹಾಯ, ಶ್ರೀಅನಂತಪದ್ಮನಾಭಪಾರ್ಷದಾಯ ನಮಃ ।

॥ ಸಪ್ತಮಾವರಣಪೂಜಾಂ ಸಮರ್ಪಯಾಮಿ ॥

ಪುಷ್ಪಪೂಜಾ ।

ಓಂ ವಾಸುದೇವಾಯ ನಮಃ, ಪದ್ಮಪುಷ್ಪಂ (ಕಮಲ) ಸಮರ್ಪಯಾಮಿ ।
ಓಂ ಹಯಗ್ರೀವಾಯ ನಮಃ, ನೀಲೋತ್ಪಲಪುಷ್ಪಂ (ಕುಮುದ) ಸಮರ್ಪಯಾಮಿ ।
ಓಂ ಉಪೇಂದ್ರಾಯ ನಮಃ, ನಂದ್ಯಾವರ್ತಪುಷ್ಪಂ (ನಂದಿಬಟ್ಟಲು) ಸಮರ್ಪಯಾಮಿ ।
ಓಂ ಅನಂತಾಯ ನಮಃ, ಮಂದಾರಪುಷ್ಪಂ (ಮಂದಾರ) ಸಮರ್ಪಯಾಮಿ ।
ಓಂ ನರಸಿಂಹಾಯ ನಮಃ, ಕೇತಕೀಪುಷ್ಪಂ (ಕೇದಿಗೆ) ಸಮರ್ಪಯಾಮಿ ।
ಓಂ ಕೇಶವಾಯ ನಮಃ, ಜಾತೀಪುಷ್ಪಂ (ಜಾಜಿ) ಸಮರ್ಪಯಾಮಿ ।
ಓಂ ರಮಾಕಾಂತಾಯ ನಮಃ, ಮಲ್ಲಿಕಾಪುಷ್ಪಂ (ಮಲ್ಲಿಗೆ) ಸಮರ್ಪಯಾಮಿ ।

ಓಂ ವಾಮನಾಯ ನಮಃ, ಪುನ್ನಾಗಪುಷ್ಪಂ (ಹೊನ್ನೆ) ಸಮರ್ಪಯಾಮಿ ।
ಓಂ ಗರುಡಧ್ವಜಾಯ ನಮಃ, ಚಂಪಕಪುಷ್ಪಂ (ಸಂಪಿಗೆ) ಸಮರ್ಪಯಾಮಿ ।
ಓಂ ಸರ್ವಾತ್ಮನೇ ನಮಃ, ಪಾರಿಜಾತಪುಷ್ಪಂ (ಪಾರಿಜಾತ) ಸಮರ್ಪಯಾಮಿ ।
ಓಂ ಬಲಭದ್ರಾನುಜಾಯ ನಮಃ, ಅಶೋಕಪುಷ್ಪಂ (ಅಶೋಕ) ಸಮರ್ಪಯಾಮಿ ।
ಓಂ ಧರಣೀಧರಾಯ ನಮಃ, ಬಕುಲಪುಷ್ಪಂ (ನಾಗಕೇಸರ) ಸಮರ್ಪಯಾಮಿ ।
ಓಂ ನಾರಾಯಣಾಯ ನಮಃ, ಕುಂದಪುಷ್ಪಂ (ದುಂಡುಮಲ್ಲಿಗೆ) ಸಮರ್ಪಯಾಮಿ ।
ಓಂ ಅನಿರುದ್ಧಾಯ ನಮಃ, ಪಾಟಲೀಪುಷ್ಪಂ (ಹಸಿರು ಪಾದರಿ) ಸಮರ್ಪಯಾಮಿ ।
ಓಂ ಹರಯೇ ನಮಃ, ಅತಸೀಪುಷ್ಪಂ (ಅಗಸೆ) ಸಮರ್ಪಯಾಮಿ ।
ಓಂ ಶ್ರೀಕೃಷ್ಣಾಯ ನಮಃ, ಸೇವಂತಿಕಾಪುಷ್ಪಂ (ಸೇವಂತಿಗೆ) ಸಮರ್ಪಯಾಮಿ ।
ಓಂ ಶ್ರೀಮದನಂತಪದ್ಮನಾಭಾಯ ನಮಃ, ಪುಷ್ಪಪೂಜಾಂ ಸಮರ್ಪಯಾಮಿ ॥

ಪತ್ರಪೂಜಾ ।

ಓಂ ಅನಂತಾಯ ನಮಃ, ತುಲಸೀಪತ್ರಂ (ತುಲಸೀ) ಸಮರ್ಪಯಾಮಿ ।
ಓಂ ಸಂಕರ್ಷಣಾಯ ನಮಃ, ಜಾತೀಪತ್ರಂ (ಜಾಜಿ) ಸಮರ್ಪಯಾಮಿ ।
ಓಂ ವಿಶ್ವರೂಪಾಯ ನಮಃ, ಚಂಪಕಪತ್ರಂ (ಸಂಪಿಗೆ) ಸಮರ್ಪಯಾಮಿ ।
ಓಂ ವೈಕುಂಠಾಯ ನಮಃ, ಬಿಲ್ವಪತ್ರಂ (ಬಿಲ್ವ) ಸಮರ್ಪಯಾಮಿ ।
ಓಂ ಪುರುಷೋತ್ತಮಾಯ ನಮಃ, ದೂರ್ವಾಯುಗ್ಮಂ (ಗರಿಕೆ) ಸಮರ್ಪಯಾಮಿ ।
ಓಂ ಆದಿದೇವಾಯ ನಮಃ, ಮರುವಕಪತ್ರಂ (ಮರುಗ) ಸಮರ್ಪಯಾಮಿ ।
ಓಂ ಮಹಾದೇವಾಯ ನಮಃ, ದಮನಪತ್ರಂ (ದವನ) ಸಮರ್ಪಯಾಮಿ ।
ಓಂ ಅಧೋಕ್ಷಜಾಯ ನಮಃ, ಸೇವಂತಿಕಾಪತ್ರಂ (ಸೇವಂತಿಗೆ) ಸಮರ್ಪಯಾಮಿ ।
ಓಂ ಪದ್ಮನಾಭಾಯ ನಮಃ, ಕಮಲಪತ್ರಂ (ಕಮಲ) ಸಮರ್ಪಯಾಮಿ ।
ಓಂ ದಾಮೋದರಾಯ ನಮಃ, ಕರವೀರಪತ್ರಂ (ಕಣಗಿಲೆ) ಸಮರ್ಪಯಾಮಿ ।
ಓಂ ವಿಶ್ವಾತ್ಮನೇ ನಮಃ, ವಿಷ್ಣುಕ್ರಾಂತಿಪತ್ರಂ (ವಿಷ್ಣುಕ್ರಾಂತಿ) ಸಮರ್ಪಯಾಮಿ ।
ಓಂ ವರಾಹಾಯ ನಮಃ, ದಾಡಿಮೀಪತ್ರಂ (ದಾಳಿಂಬೆ) ಸಮರ್ಪಯಾಮಿ ।
ಓಂ ನರಸಿಂಹಾಯ ನಮಃ, ಪಾರಿಜಾತಪತ್ರಂ (ಪಾರಿಜಾತ) ಸಮರ್ಪಯಾಮಿ ।
ಓಂ ಲೋಕನಾಥಾಯ ನಮಃ, ಮಾಚೀಪತ್ರಂ (ಮಂಚಿ) ಸಮರ್ಪಯಾಮಿ ।
ಓಂ ಶ್ರೀಕಾಂತಾಯ ನಮಃ, ದೇವದಾರುಪತ್ರಂ (ದೇವದಾರು) ಸಮರ್ಪಯಾಮಿ ।
ಓಂ ವಿಶ್ವತೋಮುಖಾಯ ನಮಃ, ಚೂತಪತ್ರಂ (ಮಾವು) ಸಮರ್ಪಯಾಮಿ ।
ಓಂ ಅಚ್ಯುತಾಯ ನಮಃ, ವೇಣುಪತ್ರಂ (ಬಿದಿರು) ಸಮರ್ಪಯಾಮಿ ।
ಓಂ ಸಹಸ್ರಶಿರಸೇ ನಮಃ, ವಟಪತ್ರಂ (ಆಲ) ಸಮರ್ಪಯಾಮಿ ।
ಓಂ ಶ್ರೀಮದನಂತಪದ್ಮನಾಭಾಯ ನಮಃ, ಪತ್ರಪೂಜಾಂ ಸಮರ್ಪಯಾಮಿ ॥

ಧೂಪಃ ।

ದಶಾಂಗಂ ಗುಗ್ಗುಲೋಪೇತಂ ಧೂಪಂ ಚಾತಿಮನೋಹರಮ್ ।
ಕಪಿಲಾಘೃತಸಂಯುಕ್ತಂ ಗೃಹಾಣ ಪುರುಷೋತ್ತಮ ॥

ಓಂ ॥ ಯತ್ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।
ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ಧೂಪಮಾಘ್ರಾಪಯಾಮಿ ।
(ಧೂಪಾರತಿ ಮಾಡಿ, ನಂತರ ಅರ್ಘ್ಯಪಾತ್ರೆಗೆ ಹಾಕಿ)

ದೀಪಮ್ ।

ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ ।
ದೀಪಂ ಗೃಹಾಣ ದೇವೇಶ ತ್ರೈಲೋಕ್ಯತಿಮಿರಾಪಹ ॥

ಓಂ ॥ ಬ್ರಾಹ್ಮಣೋಽಸ್ಯ ಮುಖಮಾಸೀತ್ ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ ಪದ್‌ಭ್ಯಾಂ ಶೂದ್ರೋ ಅಜಾಯತ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ದೀಪಂ ದರ್ಶಯಾಮಿ ।
(3 ಬತ್ತಿಯ ಏಕಾರ್ತಿ ದೀಪ ಬೆಳಗಿ, ಶಾಂತಗೊಳಿಸಿ)

ನೈವೇದ್ಯಮ್ ।

ನಾನಾಭಕ್ಷ್ಯೈಶ್ಚ ಭೋಜ್ಯೈಶ್ಚ ರಸೈಷಡ್ಭಿಃ ಸಮನ್ವಿತಮ್ ।
ಲೇಹ್ಯಪೇಯಾದಿಯುಕ್ತಂ ಚ ನೈವೇದ್ಯಮುಪಭುಜ್ಯತಾಮ್ ॥

ಓಂ ॥ ಚಂದ್ರಮಾ ಮನಸೋ ಜಾತಃ ಚಕ್ಷೋಃ ಸೂರ್ಯೋ ಅಜಾಯತ ।
ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ನೈವೇದ್ಯಂ ಸಮರ್ಪಯಾಮಿ ।

('ಓಂ ಶ್ರೀಮದನಂತಪದ್ಮನಾಭಾಯ ನಮಃ' ಈ ಮೂಲಮಂತ್ರವನ್ನು 108 ಬಾರಿ ಜಪಿಸಿ 'ಓಂ ಭೂರ್ಭುವಸ್ವಃ ಸತ್ಯಂತ್ವರ್ತೇನ ಪರಿಷಿಂಚಾಮಿ ಅಮೃತೋಪಸ್ತರಣಮಸಿ ಪ್ರಾಣಾಪಾನ ವ್ಯಾನೋದಾನ ಸಮಾನಾಃ' ಶಂಖದೊಳಗೆ ಶುದ್ಧೋದಕ ಮತ್ತು ತುಳಸೀದಳವನ್ನು ಹಾಕಿ 'ಓಂ ನಮೋ ನಾರಾಯಣಾಯ ನಮಃ' ಎಂಬ ಅಷ್ಟಾಕ್ಷರ ಮಂತ್ರದಿಂದ ಶುದ್ಧೋದಕವನ್ನಭಿಮಂತ್ರಿಸಿ ಆ ನೀರನ್ನು ಕೈಗೆ ಹಾಕಿಕೊಂಡು ನೈವೇದ್ಯದ ಪದಾರ್ಥಗಳಿಗೆ ಸುತ್ತು ಹಾಕಬೇಕು (ಪರಿಷೇಚನ ಮಾಡಬೇಕು)).

ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ । ಉತ್ತರಾಪೋಶನಂ ಸಮರ್ಪಯಾಮಿ । ಹಸ್ತಪ್ರಕ್ಷಾಲನಂ ಸಮರ್ಪಯಾಮಿ । ಮುಖಪ್ರಕ್ಷಾಲನಂ

ಸಮರ್ಪಯಾಮಿ। ಕರೋದ್ವರ್ತನಾರ್ಥೇ ಚಂದನಂ ಸಮರ್ಪಯಾಮಿ ।
ಆಚಮನೀಯಂ ಸಮರ್ಪಯಾಮಿ ।
(ಇವುಗಳನ್ನು ಹೇಳುತ್ತಾ ನೀರನ್ನು ಅರ್ಘ್ಯಪಾತ್ರೆಗೆ ಬಿಡಬೇಕು)

ಫಲನಿವೇದನಮ್ ।

ಬೀಜಪೂರಾಮ್ರಪನಸಖರ್ಜೂರೀಕದಲೀಫಲಮ್ ।
ನಾರಿಕೇಲಫಲಂ ದಿವ್ಯಂ ಗೃಹಾಣಾಭೀಷ್ಟದಾಯಕ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ನಾನಾವಿಧಫಲಾನಿ ಸಮರ್ಪಯಾಮಿ ।
(ಹಣ್ಣುಗಳ ನೈವೇದ್ಯ ಮಾಡಬೇಕು)

ತಾಂಬೂಲಮ್ ।

ಪೂಗೀಫಲಸಮಾಯುಕ್ತಂ ನಾಗವಲ್ಲೀದಲೈರ್ಯುತಮ್ ।
ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ತಾಂಬೂಲಂ ಸಮರ್ಪಯಾಮಿ ।
(ವೀಳ್ಯದೆಲೆ - ಅಡಿಕೆ ನೈವೇದ್ಯ ಮಾಡಬೇಕು)

ದಕ್ಷಿಣಾ ।

ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದಮತಃ ಶಾಂತಿಂ ಪ್ರಯಚ್ಛ ಮೇ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ಸುವರ್ಣಪುಷ್ಪದಕ್ಷಿಣಾಂ ಸಮರ್ಪಯಾಮಿ ।
(ತಾಂಬೂಲದಲ್ಲಿ ದಕ್ಷಿಣೆಯನ್ನಿಟ್ಟು ಸಮರ್ಪಿಸಬೇಕು)

ಪೂರ್ಣಫಲಸ್ಥಾಪನಮ್ ।

ಇದಂ ಫಲಂ ಮಯಾ ದೇವ ಸ್ಥಾಪಿತಂ ಪುರತಸ್ತವ ।
ತೇನ ಮೇ ಸಕಲಾವಾಪ್ತಿರ್ಭವೇಜ್ಜನ್ಮನಿ ಜನ್ಮನಿ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ಪೂರ್ಣಫಲಂ ಸ್ಥಾಪಯಾಮಿ ।
(ಎಲೆ-ಅಡಿಕೆ ತೆಂಗಿನಕಾಯಿಯನ್ನು ಜುಟ್ಟು ಹಿಂಭಾಗಕ್ಕೆ ಬರುವಂತೆ ಮಾಡಿ ದೇವರ ಬಲಭಾಗದಲ್ಲಿ ಇಡಬೇಕು)

ಮಂಗಲನೀರಾಜನಮ್ ।

ಚಂದ್ರಾದಿತ್ಯೋ ತಥಾ ತಾರಾ ವಿದ್ಯುದಗ್ನಿಸ್ತಥೈವ ಚ ।
ತ್ವಮೇವ ಸರ್ವಜ್ಯೋತೀಂಷಿ ಆರ್ತಿಕ್ಯಂ ಪ್ರತಿಗೃಹ್ಯತಾಮ್ ॥
ಓಂ ॥ ಶ್ರಿಯೇ ಜಾತಃ ಶ್ರಿಯ ಆನಿರಿಯಾಯ ಶ್ರಿಯಂ ವಯೋ ಜರಿತೃಭ್ಯೋ ದಧಾತಿ ।
ಶ್ರಿಯಂ ವಸಾನಾ ಅಮೃತತ್ವಮಾಯನ್ ಭವಂತಿ ಸತ್ಯಾ ಸಮಿಥಾಮಿತದ್ರೌ ॥

ಶ್ರಿಯ ಏವೈನಂ ತಚ್ಛ್ರಿಯಮಾದಧಾತಿ । ಸಂತತಮೃಚಾ ವಷಟ್ ಕೃತ್ಯಂ ಸಂತತ್ಯೈ ಸಂಧೀಯತೇ । ಪ್ರಜಯಾ ಪಶುಭಿರ್ಯ ಏವಂ ವೇದ ।

ಓಂ ॥ ನಾಭ್ಯಾ ಆಸೀದನಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ತಥಾ ಲೋಕಾಂ ಅಕಲ್ಪಯನ್ ॥

ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।
ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ
ಸರಸಿಜನಯನೋಽಸೌ ಶ್ರೀಪತಿರ್ಮಾನದೋ ನಃ ॥

ಓಂ ಶ್ರೀಮದನಂತಪದ್ಮನಾಭಾಯ ನಮಃ, ಮಹಾನೀರಾಜನಂ ಸಮರ್ಪಯಾಮಿ ।
(ಮಂಗಳಾರತಿ ಮಾಡಬೇಕು)

ಮಂತ್ರಪುಷ್ಪಾಂಜಲಿಃ ।

ಓಂ ॥ ಯೋ ನಃ ಪಿತಾ ಜನಿತಾ ಯೋ ವಿಧಾತಾ ಧಾಮಾನಿ ವೇದ ಭುವನಾನಿ ವಿಶ್ವಾ ।
ಯೋ ದೇವಾನಾಂ ನಾಮಧಾ ಏಕ ಏವ ತಂ ಸಂಪ್ರಶ್ನಂ ಭುವನಾಯನಂತ್ಯನ್ಯಾ ॥

ಓಂ ॥ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।
ತನ್ನೋ ವಿಷ್ಣುಃ ಪ್ರಚೋದಯಾತ್ ॥

ಓಂ ॥ ಮಹಾದೇವ್ಯೈ ಚ ವಿದ್ಮಹೇ ವಿಷ್ಣುಪತ್ನೀ ಚ ಧೀಮಹಿ ।
ತನ್ನೋ ಲಕ್ಷ್ಮೀಃ ಪ್ರಚೋದಯಾತ್ ॥

ಓಂ ಶ್ರೀಮದನಂತಪದ್ಮನಾಭಾಯ ನಮಃ, ಮಂತ್ರಪುಷ್ಪಾಂಜಲಿಂ ಸಮರ್ಪಯಾಮಿ ।
(ಕೈಯಲ್ಲಿ ಮಂತ್ರಾಕ್ಷತೆ, ತುಳಸಿ, ಪುಷ್ಪಗಳನ್ನು ಹಿಡಿದುಕೊಂಡು ಮಂತ್ರಪುಷ್ಪ ಹೇಳಿ ನಂತರ ದೇವರ ಸನ್ನಿಧಿಗೆ ಅರ್ಪಣೆ ಮಾಡಿ)

ರಾಜೋಪಚಾರಪೂಜಾ ।

ಛತ್ರಚಾಮರವ್ಯಜನದರ್ಪಣನೃತ್ಯಗೀತವಾದ್ಯಾಂದೋಲಿಕಾದಿ
ಸಮಸ್ತರಾಜೋಪಚಾರಾರ್ಥೇ ಅಕ್ಷತಾನ್ ಸಮರ್ಪಯಾಮಿ ।
(ಮಂತ್ರಾಕ್ಷತೆ ಹಾಕಿರಿ)

ಪ್ರದಕ್ಷಿಣಾ ।

ಯಾನಿ ಕಾನಿ ಚ ಪಾಪಾನಿ ಜನ್ಮಾಂತರಕೃತಾನಿ ಚ ।
ತಾನಿ ತಾನಿ ವಿನಶ್ಯಂತಿ ಪ್ರದಕ್ಷಿಣ ಪದೇ ಪದೇ ॥

ಓಂ ॥ ಸಪ್ತಾಸ್ಯಾಸನ್ ಪರಿಧಯಃ ತ್ರಿಸ್ಸಪ್ತಸಮಿಧಃ ಕೃತಾಃ ।
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ ಪುರುಷಂ ಪಶುಮ್ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ಪ್ರದಕ್ಷಿಣಾಂ ಸಮರ್ಪಯಾಮಿ ।
(ಪ್ರದಕ್ಷಿಣೆ ಮಾಡಿ)

ನಮಸ್ಕಾರಃ ।

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥

ಓಂ ॥ ಯಜ್ಞೇನ ಯಜ್ಞಮಯಜಂತ ದೇವಾಃ ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥
ಓಂ ಶ್ರೀಮದನಂತಪದ್ಮನಾಭಾಯ ನಮಃ, ನಮಸ್ಕಾರಾನ್ ಸಮರ್ಪಯಾಮಿ ।
(ನಮಸ್ಕಾರಗಳನ್ನು ಮಾಡಿರಿ)

ದೋರಪ್ರಾರ್ಥನಾ ।

ಅನಂತಾಯ ನಮಸ್ತುಭ್ಯಂ ಸಹಸ್ರಶಿರಸೇ ನಮಃ ।
ನಮೋಽಸ್ತು ಪದ್ಮನಾಭಾಯ ನಾಗಾನಾಂ ಪತಯೇ ನಮಃ ॥
ಅನಂತಃ ಕಾಮದಃ ಶ್ರೀಮಾನನಂತೋ ಮೇ ಪ್ರಯಚ್ಛತು ।
ಅನಂತೋ ದೋರರೂಪೇಣ ಪುತ್ರ ಪೌತ್ರಾನ್ ವಿವರ್ಧಯ ॥

ದೋರಗ್ರಹಣಮ್ ।

ಸ್ವೀಕರೋಮಿ ಶುಭಂ ಸೂತ್ರಂ ವಿಜ್ಞಾನಪ್ರದ ಸರ್ವದಾ ।
ದೋರರೂಪೇಣ ಮಾಂ ರಕ್ಷ ಪುರಾಣ ಪುರುಷೋತ್ತಮ ॥
(ದೇವರ ಸನ್ನಿಧಿಯಿಂದ ದಾರವನ್ನು ಸ್ವೀಕರಿಸಬೇಕು)

ದೋರನಮಸ್ಕಾರಃ

ಅನಂತಸಂಸಾರಮಹಾಸಮುದ್ರಮಗ್ನಂ ಸಮಭ್ಯುದ್ಧರ ವಾಸುದೇವ ।
ಅನಂತರೂಪಿನ್ ವಿನಿಯೋಜಯಸ್ವ ಹ್ಯನಂತಸೂತ್ರಾಯ ನಮೋ ನಮಸ್ತೇ ॥
(ಅನಂತನ ದಾರಕ್ಕೆ ನಮಸ್ಕಾರ ಮಾಡಬೇಕು)

ದೋರಬಂಧನಮ್ ।

ಅನಂತ ಸರ್ವದೇವೇಶ ಭುಕ್ತಿಮುಕ್ತಿಪ್ರದಾಯಕ ।
ಸರ್ವೇಷ್ಟದಮಿದಂ ಸೂತ್ರಂ ಧಾರಯಾಮಿ ತವ ಪ್ರಿಯಮ್ ॥

ಸಂಸಾರಗಹ್ವರಗುಹಾಸು ಸುಖಂ ವಿಹರ್ತುಂ
ವಾಂಛಂತಿ ಯೇ ಕುರುಕುಲೋದ್ಭವ ಶುದ್ಧಸತ್ವಾಃ ।
ಸಂಪೂಜ್ಯ ಚ ತ್ರಿಭುವನೇಶಮನಂತರೂಪಂ
ಬಧ್ನಂತಿ ದಕ್ಷಿಣಕರೇ ವರದೋರಕಂ ತೇ ॥

(ಬಲತೋಳಿಗೆ ಕಟ್ಟಿಕೊಳ್ಳುವಾಗ ಈ ಮಂತ್ರ ಹೇಳಬೇಕು. ಹೆಂಗಸರು ಕುತ್ತಿಗೆಗೆ ಅನಂತದಾರ ಹಾಕಿಕೊಳ್ಳುವಾಗಲೂ ಈ ಮಂತ್ರ ಹೇಳಬೇಕು)

ಜೀರ್ಣದೋರವಿಸರ್ಜನಮ್ ।

ವಿಸರ್ಜಯಾಮಿ ದೇವೇಶ ಪೂರ್ವಂ ಸೂತ್ರಂ ಧೃತಂ ಪರಮ್ ।
ಸಂಪೂರ್ಣಂ ವ್ರತಮಸ್ತ್ವತ್ರ ಮತ್ಕೃತಂ ತ್ವದನುಜ್ಞಯಾ ॥
(ಹಳೇದಾರ ಬಿಚ್ಚುವಾಗ ಮೇಲಿನ ಶ್ಲೋಕವನ್ನು ಹೇಳಬೇಕು)

ನಮಸ್ತೇ ದೇವದೇವೇಶ ನಮಸ್ತೇ ಧರಣೀಧರ ।
ನಮಸ್ತೇ ಸರ್ವನಾಗೇಂದ್ರ ನಮಸ್ತೇ ಪುರುಷೋತ್ತಮ ॥
(ಹಳೇದಾರಕ್ಕೆ ನಮಿಸ್ಕರಿಸಬೇಕು)

ನಮಸ್ಸರ್ವಹಿತಾನನಂತ ಜಗದಾನಂದಕಾರಕ ।
ಜೀರ್ಣದೋರಮಮುಂ ದೇವ ವಿಸೃಜೇಽಹಂ ತ್ವದಾಜ್ಞಯಾ ॥
(ಹಳೇ ದಾರವನ್ನು ವಿಸರ್ಜನೆ ಮಾಡಬೇಕು)

ಸಮಾಪನಮ್ ।

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಪೂಜಾಕ್ರಿಯಾದಿಷು ।
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಂ ॥

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ ।
ಯತ್ಪೂಜಿತಂ ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥

ಅನೇನ ಶ್ರೀಮದನಂತಪದ್ಮನಾಭಪೂಜನೇನ ಶ್ರೀಮದ್ರಾಘವೇಂದ್ರತೀರ್ಥಗುರ್ವಂತರ್ಗತಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣ ಪ್ರೀಯತಾಂ ಸುಪ್ರೀತೋ ವರದೋ ಭವತು ॥
(ಮೀಸಲು ನೀರು ಮತ್ತು ಮಂತ್ರಾಕ್ಷತೆಗಳನ್ನು ಕೈಗೆ ಹಾಕಿಕೊಂಡು ಅರ್ಘ್ಯಪಾತ್ರೆಗೆ ಬಿಡಬೇಕು)

॥ ಶ್ರೀಕೃಷ್ಣಾರ್ಪಣಮಸ್ತು ॥

ವಾಯನದಾನ ಸಂಕಲ್ಪಃ ।

ಶ್ರೀಹರಯೇ ನಮಃ । ಕೇಶವಾಯ ನಮಃ ...... ಶ್ರೀಕೃಷ್ಣಾಯ ನಮಃ ।
ಓಂ ಪ್ರಣವಸ್ಯ ಪರಬ್ರಹ್ಮಋಷಿಃ ...... ಸ್ವರೋಮ್ ।

ಅದ್ಯ ಪೂರ್ವೋಚ್ಚರಿತ ಏವಂ ಗುಣವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಮದನಂತಪದ್ಮನಾಭ-ಪ್ರೇರಣಯಾ ಶ್ರೀಮದನಂತಪದ್ಮನಾಭಪ್ರೀತ್ಯರ್ಥಂ ಆಚರಿತ ವ್ರತಸ್ಯ ಸಂಪೂರ್ಣಫಲ ಪ್ರಾಪ್ತ್ಯರ್ಥಂ ಬ್ರಾಹ್ಮಣಾಯ ಉಪಾಯನದಾನಮಹಂ ಕರಿಷ್ಯೇ ॥
(ಮಂತ್ರಾಕ್ಷತೆ ನೀರನ್ನು ಅರ್ಘ್ಯಪಾತ್ರೆಗೆ ಬಿಡಬೇಕು)

ಬ್ರಾಹ್ಮಣಪೂಜನಂ ಚ ಕರಿಷ್ಯೇ ॥

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥
ದೇವಂ ಭವತ್ಸು ಆವಾಹಯಿಷ್ಯೇ ।
(ಬ್ರಾಹ್ಮಣನ ತಲೆಯ ಮೇಲೆ ಮಂತ್ರಾಕ್ಷತೆ ಹಾಕಬೇಕು)
ಇದಮಾಸನಂ । ಸುಖಾಸನಂ ।
(ಬ್ರಾಹ್ಮಣರು ಕುಳಿತುಕೊಂಡ ಆಸನಕ್ಕೆ ಮಂತ್ರಾಕ್ಷತೆ ಹಾಕಬೇಕು)
ಇದಂ ವಃ ಪಾದ್ಯಮ್ । (ಈ ವಾಕ್ಯವನ್ನು ಯಜಮಾನನು ಹೇಳಬೇಕು)
ಸುಪಾದ್ಯಮ್ । (ಬ್ರಾಹ್ಮಣನ ಕಾಲು ತೊಳೆಯುವುದು)
ಇದಂ ವೋ ಅರ್ಘ್ಯಮ್ । (ಎಂದು ಯಜಮಾನನು ಹೇಳಬೇಕು)
ಅಸ್ತ್ವರ್ಘ್ಯಮ್ । (ಕೈಗೆ ಮಂತ್ರಾಕ್ಷತೆ ಮತ್ತು ಶುದ್ಧೋದಕ ನೀಡಿರಿ)
ಇದಮಾಚಮನೀಯಂ । (ಎಂದು ಯಜಮಾನನು ಹೇಳಬೇಕು)
ಅಸ್ತ್ವಾಚಮನೀಯಂ । (ಕೈಗೆ ಮಂತ್ರಾಕ್ಷತೆ ಮತ್ತು ಶುದ್ಧೋದಕ ನೀಡಿರಿ)
ಗಂಧಾಃ ಪಾಂತು । ಸೌಮಂಗಲ್ಯಂ ಚಾಸ್ತು ।
(ಬ್ರಾಹ್ಮಣನಿಗೆ ದೇವರ ನಿರ್ಮಾಲ್ಯ ಗಂಧ ನೀಡಿ)
ಅಕ್ಷತಾಃ ಪಾಂತು । ಆಯುಷ್ಯಮಸ್ತು ।
(ಬ್ರಾಹ್ಮಣನಿಗೆ ಅಕ್ಷತೆ, ಮಂತ್ರಾಕ್ಷತೆ ನೀಡಿ)
ಪುಷ್ಪಾಣಿ ಪಾಂತು । ಸೌಶ್ರಿಯಮಸ್ತು ।
(ಬ್ರಾಹ್ಮಣನಿಗೆ ನಿರ್ಮಾಲ್ಯದ ಬಿಡಿಹೂವನ್ನು ನೀಡಿ)

ತಾಂಬೂಲಾನಿ ಪಾಂತು । ಐಶ್ವರ್ಯಮಸ್ತು ।

(ವೀಳ್ಯದೆಲೆ 4 ಅಥವಾ 5 ಕ್ಕಿಂತ ಕಡಿಮೆ ಶುಭಕಾರ್ಯದಲ್ಲಿ ಎಂದಿಗೂ ಕೊಡಬಾರದು)

ದಕ್ಷಿಣಾಃ ಪಾಂತು । ಬಹುದೇಯಂ ಚಾಸ್ತು ।

(ಬ್ರಾಹ್ಮಣರಿಗೆ ಯಥಾಶಕ್ತಿ ವಾಯನ ದಾನದ ದಕ್ಷಿಣೆ ನೀಡಬೇಕು)

ತುಳಸೀದಳ ಸಹಿತ ನೀರಿನಿಂದ ಮುಚ್ಚಿರುವ ವಾಯನಕ್ಕೆ ಪ್ರೋಕ್ಷಣೆ ಮಾಡಬೇಕು.

ಪ್ರತಿಗೃಹ್ಣ ದ್ವಿಜಶ್ರೇಷ್ಠ ವಾಯನಂ ದಕ್ಷಿಣಾಯುತಮ್ ।
ಪಕ್ವಾನ್ನ ಫಲಸಂಯುಕ್ತಂ ದಕ್ಷಿಣಾಘೃತ ಸಂಯುತಮ್ ॥

ಏತದುಪಾಯನದಾನಂ ಸೋಪಸ್ಕರಂ ಸ ತಾಂಬೂಲಂ ಸ ದಕ್ಷಿಣಾಕಂ ಅಮುಕ .... ಶರ್ಮಣೇ ಬ್ರಾಹ್ಮಣಾಯ ಶ್ರೀಮದನಂತಪದ್ಮನಾಭ ಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ ದತ್ತಂ ನ ಮಮ ನ ಮಮ । ದೇವಸ್ಯತ್ವಾ ಸವಿತುಃ ಪ್ರಸವೇಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಮ್ ।

ಅನಂತ ಪ್ರತಿಗೃಹ್ಣಾತಿ ಅನಂತೋ ವೈದದಾತಿ ಚ ।
ಉಭಯೋಸ್ತಾರಕೋಯಸ್ಮಾದನಂತಾಯ ನಮೋ ನಮಃ ॥
ಶ್ರೀಮದನಂತಪದ್ಮನಾಭಃ ಪ್ರೀಯತಾಮ್ ॥

'ಪ್ರತಿಗೃಹ್ಣಾತು' ಎಂದು ಯಜಮಾನ ಹೇಳುವುದು. 'ಪ್ರತಿಗೃಹ್ಣಾಮಃ' ಬ್ರಾಹ್ಮಣನು ಹೇಳುವುದು.

॥ ಇತಿ ಅನಂತಚತುರ್ದಶೀ ಸಂಪೂರ್ಣಾ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಕ್ಷಿಪ್ರ ವಿವಾಹ ಸಿದ್ಧಿಗಾಗಿ

ಸರ್ವಮಂಗಲದಾತಾರೌ ಪಾರ್ವತೀಪರಮೇಶ್ವರೌ ।
ಗಣೇಶಸ್ಕಂದಸಂಯುಕ್ತೌ ವಂದೇ ವಾಂಛಿತಸಿದ್ಧಯೇ ॥

ದೇವೇಂದ್ರಾಣಿ ನಮಸ್ತುಭ್ಯಂ ದೇವೇಂದ್ರಪ್ರಿಯಭಾಮಿನಿ ।
ವಿವಾಹಂ ಭಾಗ್ಯಮಾರೋಗ್ಯಂ ಪುತ್ರಲಾಭಂ ಚ ದೇಹಿ ಮೇ ॥

ಯೋಗ್ಯ ಗುರುಗಳಿಂದ ಉಪದೇಶ ಪಡೆದು ಈ ಮಂತ್ರಗಳನ್ನು ಜಪಿಸಿದರೆ, ಕಂಕಣಬಲವು ಬೇಗನೆ ಒದಗುವುದು.

॥ ಶ್ರೀಮದನಂತವ್ರತದ ಕಥೆ ॥

ನೈಮಿಷಾರಣ್ಯದಲ್ಲಿ ಶೌನಕಾದಿಗಳಿಗೆ ಸೂತಮಹರ್ಷಿಗಳು ಹೇಳಿದರು ಪೂರ್ವದಲ್ಲಿ ಭಾಗೀರಥೀ ನದಿಯ ತೀರದಲ್ಲಿ ಧರ್ಮಾಸಕ್ತನಾದಂಥ ಧರ್ಮರಾಜನು ಜರಾಸಂಧಾದಿ ದೈತ್ಯರ ಸಂಹಾರಕ್ಕಾಗಿ ಶ್ರೀಕೃಷ್ಣನ ಪ್ರೇರಣೆಯಿಂದ ರಾಜಸೂಯ ಯಜ್ಞಕ್ಕುಪಕ್ರಮಿಸಿದನು. ಶ್ರೀಕೃಷ್ಣನಿಂದಲೂ ಕೂಡಿದವನಾದ ಧರ್ಮರಾಜನು ಯಜ್ಞಕ್ಕಾಗಿ ಸಕಲ ರಾಜರನ್ನೂ ಕರೆಸಿ, ಅನೇಕ ಮುತ್ತು, ರತ್ನಗಳಿಂದಲೂ ಕೃತವಾದ ಇಂದ್ರದೇವರ ಅರಮನೆಯೋ ಎಂಬಂತೆ ಕಾಂತಿಯುಳ್ಳ ಯಜ್ಞಶಾಲೆಯನ್ನು ಮಾಡಿಸಿದನು. ಅಗ ಗಾಂಧಾರಿಯ ಪುತ್ರನಾದ ದುರ್ಯೋಧನನು ಆ ಯಜ್ಞಶಾಲೆಗೆ ಬಂದನು. ಅಲ್ಲಿ ರತ್ನಗಳ ಕಾಂತಿಯಿಂದ ನೀರಿನಂತೆ ತೋರುತ್ತಿದ್ದ ಅಂಗಣವನ್ನು ಕಂಡು ನೀರೆಂದು ಭ್ರಮಿಸಿ ತನ್ನ ವಸ್ತ್ರಗಳನ್ನು ಮೇಲಕೆತ್ತಿಕೊಂಡು ಮೆಲ್ಲಮೆಲ್ಲಗೆ ಬಂದನು. ಅಲ್ಲಿಯೇ ಇದ್ದ ದ್ರೌಪದಿಯೇ ಮೊದಲಾದ ಉತ್ತಮ ಸ್ತ್ರೀಯರು ಆತನು ಬರುತ್ತಿದ್ದ ರೀತಿಯನ್ನು ಕಂಡು ಮುಖದಲ್ಲಿ ಕಿರುನಗೆಯಿಂದ ಕೂಡಿದವರಾದರು. ಅಲ್ಲಿಂದ ಮುಂದುವರಿದ ದುರ್ಯೋಧನನು ನಿಜವಾಗಿಯೂ ಜಲಾವೃತವಾದ ಪ್ರದೇಶವನ್ನು ನೆಲವೆಂದು ತಿಳಿದು ನೀರಲ್ಲಿ ಬಿದ್ದನು. ಆಗ ಅಲ್ಲಿ ನೆರೆದಿದ್ದ ಸಕಲ ರಾಜರೂ, ತಪಸ್ವಿಗಳೂ, ದ್ರೌಪದಿಯೇ ಮೊದಲಾದ ಸ್ತ್ರೀಯರೂ ನಗುವನ್ನು ತಡೆಯದಾದರು. ದುರ್ಯೋಧನನು ಇದರಿಂದ ಕುಪಿತನಾಗಿ ತನ್ನ ಮಾವನಾದ ಶಕುನಿಯೊಡನೆ ತಮ್ಮ ರಾಜ್ಯಕ್ಕೆ ಹಿಂತಿರುಗಿ ಹೋಗೋಣವೆನ್ನಲು, ಆಗ ಆ ಶಕುನಿಯು "ಅರಸನೇ! ಮುಂದಿನ ಕಾರ್ಯಗೌರವ-ದಿಂದಲಾದರೂ ಈ ಕೋಪವನ್ನು ತ್ಯಜಿಸುವುದು ಉಚಿತವಾದುದು. ಪಗಡೆಯಾಟದ ಆರಂಭದಿಂದಲೇ ನೀನು ಸಕಲ ರಾಜ್ಯವನ್ನೂ ಪಡೆಯುವೆ. ಆದಕಾರಣ, ರಾಜಶ್ರೇಷ್ಠನೇ! ಯಾಗಶಾಲೆಗೆ ಹೋಗೋಣ ಏಳು" ಎಂದು ಮೃದುವಚನಗಳಿಂದ ಸಮಾಧಾನ ಮಾಡಿದನು.

ದುರ್ಯೋಧನನು ಶಕುನಿಯ ಮಾತಿಗೆ ಸಮ್ಮತಿಸಿ ಯಜ್ಞಶಾಲೆಗೆ ಹೊರಟನು. ಯಜ್ಞವನ್ನು ಮುಗಿಸಿಕೊಂಡು ರಾಜರುಗಳೆಲ್ಲರೂ ತಮ್ಮ ತಮ್ಮ ರಾಜ್ಯಾಭಿಮುಖವಾಗಿ ಪ್ರಯಾಣಮಾಡಿದರು. ದುರ್ಯೋಧನನೂ ಸಹ ಹಸ್ತಿನಾವತಿಯನ್ನು ಕುರಿತು ಪ್ರಯಾಣ ಬೆಳೆಸಿದನು. ಅಲ್ಲಿ ಧರ್ಮರಾಜಾದಿ ಪಾಂಡುಪುತ್ರರನ್ನು ಕರೆಸಿ, ಪಗಡೆಯಾಟದಲ್ಲಿ ವಂಚನೆಯಿಂದ ಅವರ ರಾಜ್ಯವನ್ನೆಲ್ಲ ಗೆದ್ದು ಅವರನ್ನು ವನಾಂತರ್ಗತರನ್ನಾಗಿ ಮಾಡಿದನು.

ಆಗ ಈ ವಾರ್ತೆಯನ್ನು ಕೇಳಿದ ಜಗತ್ಪತಿಯಾದ ಶ್ರೀಕೃಷ್ಣನು ಸಹೋದರರಿಂದ ಒಡಗೂಡಿದ ಧರ್ಮರಾಜನನ್ನು ನೋಡಬಯಸಿದವನಾಗಿ ಕಾಡಿಗೆ ಹೋದನು.

ದುಃಖದಿಂದ ಕೃಶರಾಗಿದ್ದ ಪಾಂಡವರು ಶ್ರೀಕೃಷ್ಣನನ್ನು ಕಂಡು ನಮಸ್ಕಾರವನ್ನು ಮಾಡಿದರು. ತದನಂತರ ಧರ್ಮರಾಜನು ಶ್ರೀಕೃಷ್ಣನನ್ನು ಕುರಿತು "ಹೇ ಪರಮಾತ್ಮಾ! ತಮ್ಮಂದಿರೊಡಗೂಡಿದ ನಾನು ಈ ಅಪಾರ ದುಃಖಾಂಬುಧಿಯಿಂದ ನಮಗೆ ಹೇಗೆ ಮೋಕ್ಷವಾಗುವುದೆಂಬುದನ್ನು ದಯವಿಟ್ಟು ಹೇಳು. ಯಾವ ದೇವನನ್ನು ಪೂಜಿಸುವುದರಿಂದ, ಯಾವ ವ್ರತವನ್ನು ಮಾಡುವುದರಿಂದ ನಮಗೆ ಪುನಃ ಈ ರಾಜ್ಯಪ್ರಾಪ್ತಿಯಾದೀತು? ಎಂಬುದನ್ನು ಅನುಗ್ರಹಿಸಿ ಹಿತವುಂಟುಮಾಡು" ಎನ್ನಲು ಶ್ರೀಕೃಷ್ಣನು "ಧರ್ಮರಾಜನೇ! ಪುರುಷರ, ಸ್ತ್ರೀಯರ ಸಕಲ ಪಾಪನಿವಾರಕವೂ ಮಂಗಳಕರವೂ, ಸರ್ವಾಭೀಷ್ಟಪ್ರದವೂ ಆದ 'ಅನಂತವ್ರತ' ವೆಂಬ ವ್ರತವೊಂದಿದೆ. ಭಾದ್ರಪದ ಶುದ್ಧ ಚತುರ್ದಶಿಯಂದು ಈ ವ್ರತವನ್ನಾಚರಿಸುವ ಮಾತ್ರದಿಂದ ಸಕಲ ಪಾಪಗಳೂ ನಿವಾರಣೆಯಾಗುತ್ತವೆ" ಎಂದನು.

ಆಗ ಯುಧಿಷ್ಠಿರನು, "ಸ್ವಾಮಿಯಾದ ಶ್ರೀಕೃಷ್ಣನೇ! ನಿನ್ನಿಂದ ಅನಂತನೆಂದು ಕರೆಯಲ್ಪಡತಕ್ಕ ಆತನು ಶೇಷನೆಂಬ ಸರ್ಪನೋ? ತಕ್ಷಕನೆಂಬ ಸರ್ಪನೋ? ಪರಮಾತ್ಮನೆಂದೆನಿಸಿಕೊಳ್ಳುವ ಆ ಪರಬ್ರಹ್ಮನೇ ಆ ಹೆಸರಿನಿಂದ ಕರೆಯಲ್ಪಡುತ್ತಾನೋ? ಎಂಬ ವಿಚಾರವನ್ನು ಸವಿಸ್ತಾರವಾಗಿ ತಿಳಿಸು" ಎಂದು ಪ್ರಾರ್ಥಿಸಲಾಗಿ, ಶ್ರೀಕೃಷ್ಣನು, "ಅಯ್ಯಾ ಕುಂತೀಪುತ್ರನಾದ ಧರ್ಮರಾಜನೇ! ಆ 'ಅನಂತ'ನೆಂಬುವನು ನಾನಲ್ಲದೆ ಬೇರೆ ಯಾರೂ ಅಲ್ಲ; ಆ ಅನಂತಸ್ವರೂಪವು ನನ್ನದೇ ಆಗಿದೆಯೆಂದು ತಿಳಿ. ಕಾಲಚಕ್ರಕ್ಕೆ ನಿಯಾಮಕರಾದ ಆದಿತ್ಯಾದಿ ಗ್ರಹರಿಗೆ ಅಂತರ್ನಿಯಾಮಕನಾಗಿ ಯಾವನು ಕಾಲಪ್ರವರ್ತಕನಾದ ಕಾರಣ ಆದಿತ್ಯಾದಿ ಗ್ರಹರಿಗೆ ಅಂತರ್ನಿಯಾಮಕನಾಗಿ ಯಾವನು ಕಾಲಪ್ರವರ್ತಕನಾದ ಕಾರಣ ಕಾಲನೆನಿಸಿಕೊಳ್ಳುವನೋ, ಕಲಾ, ಕಾಷ್ಠಾ, ಮುಹೂರ್ತ ಇತ್ಯಾದಿ ಹಗಲು, ರಾತ್ರಿ ಮೊದಲಾದ ಕಾಲಭಾಗವೇ ದೇಹವಾಗಿರುವ ಕಾಲಕ್ಕೆ ನಿಯಾಮಕನಾಗಿ ಪಕ್ಷ, ಮಾಸ, ಋತು, ವರ್ಷ ಇತ್ಯಾದಿಗಳೂ, ಕೃತಯುಗಾದಿ ಚತುರ್ಯುಗಗಳೂ, ಇವೇ ಮೊದಲಾದ ಕಾಲಗಳ ವ್ಯವಸ್ಥೆಯಿಂದ ಯಾವನು ಕಾಲನೆನಿಸಿಕೊಳ್ಳುತ್ತಾನೋ, ಆತನೇ ಅನಂತನೆನ್ನಿಸಿಕೊಳ್ಳುತ್ತಾನೆ. ಆ ಅನಂತರೂಪಿಯಾದ ನಾನೇ ಭೂಭಾರಭೂತರಾದ ದೈತ್ಯರ ಸಂಹಾರಕ್ಕಾಗಿ ಈ ಭೂಮಿಯಲ್ಲಿ ಕೃಷ್ಣನಾಗಿ ದಾನವರ ನಾಶ ಹಾಗೂ ಸಜ್ಜನರ ರಕ್ಷಣಾವ್ಯಾಜದಿಂದ ವಸುದೇವನ ವಂಶದಲ್ಲಿ ನಾನು ಅವತರಿಸಿರುವೆನೆಂದು ತಿಳಿ. ನಾನು ಆದ್ಯಂತರಹಿತನು. ಪಾಪಪರಿಹಾರನಾದುದರಿಂದ ಕೃಷ್ಣನೆನಿಸುವವನು; ವ್ಯಾಪಿಸಿಕೊಂಡಿರುವ ಕಾರಣ ವಿಷ್ಣುವೆನಿಸಿದೆನು; ಹೆಚ್ಚೇನು, ಸರ್ವವ್ಯಾಪಿಯಾಗಿರತಕ್ಕವನು, ಜಗತ್ತಿಗೆ ಸ್ವಾಮಿಯು. ವ್ಯಾಪಿಸುವ ರೂಪವುಳ್ಳವನು. ಸರ್ವಕಾಲಕ್ಕೂ ಸ್ವಾಮಿಯಾದುದರಿಂದ ಕಾಲನಿಯಾಮಕನಾಗಿ ಮಹಾಕಾಲ ನೆನಿಸಿದವನು. ಜಗತ್ತಿನ ಸೃಷ್ಟಿಸಂಹಾರಕಾರಕನು. ಇಂತಹ ಮಹಾಮಹಿಮ- ನೆಂಬುದನ್ನು ಶ್ರುತಪಡಿಸುವ ಸಲುವಾಗಿಯೇ! ಯೋಗಿಗಳಿಗೆ ಧ್ಯಾನಿಸಲು ಯೋಗ್ಯವಾದ

ಅತ್ಯುತ್ತಮವಾದ ಅಂತ್ಯರಹಿತವಾದ ಕಾರಣ ಅನಂತವೆನಿಸಿದ ಆ ವಿಶ್ವರೂಪದಲ್ಲಿ ಚತುರ್ದಶ ಇಂದ್ರರೂ, ಅಷ್ಟವಸುಗಳೂ, ದ್ವಾದಶಾದಿತ್ಯರೂ, ಏಕಾದಶ ರುದ್ರರೂ, ಸಪ್ತರ್ಷಿಗಳೂ, ಸಪ್ತ ಸಮುದ್ರಗಳೂ, ಪರ್ವತಗಳೂ, ನದಿಗಳೂ, ಮಹಾವೃಕ್ಷಗಳೂ, ನಕ್ಷತ್ರಗಳೂ, ದಿಕ್ಕುಗಳೂ, ಭೂಮಿಯೂ, ಪಾತಾಳವೂ, ಭೂರ್ಭುವಃ ಇತ್ಯಾದಿ ಲೋಕಗಳೂ, ಕಾಣಲ್ಪಟ್ಟಿದ್ದವೋ ಅಂತಹ ವಿಶ್ವರೂಪಿಯಾದ ಅನಂತನು ನಾನೇ ಎಂಬ ವಿಷಯದಲ್ಲಿ ನಿನಗೆ ಸಂಶಯ ಬೇಡ" ಎಂಬುದಾಗಿ ತಿಳಿಸಿದನು.

ಅನಂತನಾರೆಂಬುದನ್ನು ಅರಿತ ಧರ್ಮರಾಜನು ಶ್ರೀಕೃಷ್ಣನನ್ನು ಕುರಿತು "ಜ್ಞಾನಿಶ್ರೇಷ್ಠನಾದ ಶ್ರೀಕೃಷ್ಣನೇ! ಅನಂತವ್ರತದ ಮಹಿಮೆಯನ್ನೂ ಅದನ್ನು ಮಾಡತಕ್ಕ ವಿಧಾನವನ್ನೂ ತಿಳಿಸು. ಈ ವ್ರತದ ಪುಣ್ಯ ಎಂತಹುದು? ಫಲ ಎಂತಹುದು? ದಾನ ಎಂತಹುದು? ಈ ವ್ರತದಲ್ಲಿ ಯಾವ ದೇವರ ಪೂಜೆಯು ವಿಹಿತವಾಗಿದೆ ? ಮೊತ್ತಮೊದಲು ಪೂರ್ವದಲ್ಲಿ ಯಾರಿಂದ ಈ ವ್ರತವು ಆಚರಿಸಲ್ಪಟ್ಟಿದೆ? ಮರ್ತ್ಯಲೋಕದಲ್ಲಿ ಯಾರಿಂದ ಪ್ರಕಟಿಸಲ್ಪಟ್ಟಿದೆ? ಹೀಗೆ ವಿಸ್ತಾರವಾಗಿ ಸಮಸ್ತವಾದ ಅನಂತವ್ರತದ ಇತಿಹಾಸವನ್ನು ನನಗೆ ಕೃಪೆಮಾಡಿ ತಿಳಿಸು" ಎನ್ನಲು ಶ್ರೀಕೃಷ್ಣನು "ಪೂರ್ವದಲ್ಲಿ ಕೃತಯುಗದಲ್ಲಿ ಸುಮಂತುವೆಂಬ ಬ್ರಾಹ್ಮಣನ ಮಗಳಾದ ಸುಂದರಿಯಾದ ದೀಕ್ಷೆಯೆಂಬ ಕನ್ನಿಕೆಯನ್ನು ವೇದೋಕ್ತರೀತಿಯಲ್ಲಿ ಮದುವೆ ಮಾಡಿಕೊಂಡನು. ರಾಜನೇ! ಕೆಲಕಾಲಾನಂತರ ಆಕೆಗೆ ಅಪರಿಮಿತ ಸ್ತ್ರೀಲಕ್ಷಣಗಳಿಂದ ಶೋಭಿತಳಾದ ಮಗಳು ಹುಟ್ಟಿದಳು. ಆ ಮಗುವಿಗೆ ಶೀಲೆಯೆಂದು ನಾಮಕರಣ ಮಾಡಿದರು. ಆಕೆಯು ತಂದೆಯ ಮನೆಯಲ್ಲೇ ಬೆಳೆಯುತ್ತಿರುವ ಕಾಲದಲ್ಲಿ ಆಕೆಯ ತಾಯಿಯು ಜ್ವರದಿಂದ ಪೀಡಿತಳಾಗಿ ನದಿಯ ಬಳಿಯಲ್ಲಿಯೇ ಸ್ವರ್ಗಸ್ಥಳಾದಳು. ಆಮೇಲೆ ಸುಮಂತುವು ಧರ್ಮಾಸಕ್ತನಾದ ಬ್ರಾಹ್ಮಣನೋರ್ವನ ಮಗಳಾದ ಕರ್ಕಸೆಯೆಂಬ ಮತ್ತೊಬ್ಬಾಕೆಯನ್ನು ಶಾಸ್ತ್ರೋಕ್ತರೀತಿಯಲ್ಲಿ ವಿವಾಹವಾದನು. ಆಕೆಯಾದರೋ ಅತ್ಯಂತ ದುಃಶೀಲಳೂ ಅತಿ ಕ್ರೂರಸ್ವಭಾವದವಳೂ, ಮಹಾಕೋಪಿಷ್ಠಳೂ, ಸದಾ ಜಗಳವಾಡತಕ್ಕವಳೂ ಆಗಿದ್ದಳು. ಇತ್ತ ಶೀಲೆಯಾದರೋ ತಂದೆಯ ಮನೆಯಲ್ಲಿ ಗೃಹಕೃತ್ಯಗಳಲ್ಲಿ ಆಸಕ್ತಳಾಗಿ, ಗೋಡೆ, ಕಂಬ, ಹೊರಬಾಗಿಲು, ಹೊಸ್ತಿಲು, ತೋರಣ, ಇತ್ಯಾದಿ ಸ್ಥಳಗಳಲ್ಲಿ ಕಪ್ಪು, ಹಳದಿ, ಬಿಳಿ, ನೀಲ, ಇತ್ಯಾದಿ ವರ್ಣಗಳಿಂದ ಚಿತ್ರಗಳನ್ನು ಬಿಡಿಸುತ್ತಲೂ, ಸ್ವಸ್ತಿಕ, ಶಂಖ, ಪದ್ಮಾದ್ಯದಿರಂಗವಲ್ಲಿಗಳಿಂದ ಮನೆಯನ್ನೆಲ್ಲ ಅಲಂಕರಿಸುತ್ತಲೂ ಬೆಳೆಯುತ್ತಿದ್ದು ಪ್ರಾಯಭರಿತಳಾದಳು.

ಯೌವನಸ್ಥಳಾದ ಶೀಲೆಯನ್ನು ಕಂಡ ಸುಮಂತುವು ಆಕೆಗೆ ಯೋಗ್ಯ ವರಾನ್ವೇಷಣೆ-ಯಲ್ಲಿದ್ದ ಕಾಲದಲ್ಲಿ ವೇದಜ್ಞರಲ್ಲಿ ಶ್ರೇಷ್ಠನಾದ ಕೌಂಡಿನ್ಯನೆಂಬ ಋಷಿವರ್ಯನು ಕನ್ಯಾರ್ಥಿಯಾಗಿ ಬಂದನು. ಸುಮಂತುವು ಸಂತೋಷದಿಂದ ಒಪ್ಪಿ ಆ ಬ್ರಾಹ್ಮಣನಿಗೆ ಶೀಲೆಯನ್ನಿತ್ತು ಲಗ್ನಮಾಡಿದನು. ಅಲ್ಲಿ ಬಂದಿದ್ದ ಬ್ರಾಹ್ಮಣರೆಲ್ಲರೂ ಸ್ವಸ್ತಿವಾಚನವನ್ನು ಹೇಳಿದರು. ಲಗ್ನವು ಸಾಂಗವಾಗಿ ನಡೆದ ನಂತರ ಸುಮಂತುವು ತನ್ನ ಪತ್ನಿಯಾದ ಕರ್ಕಶೆಯನ್ನು

ಕುರಿತು "ಪ್ರಿಯೆ! ಅಳಿಯನಿಗೆ ಬಳುವಳಿರೂಪವಾಗಿ ಏನಾದರೂ ಉತ್ತಮ ವಸ್ತುವನ್ನು ಕೊಡಬೇಕು, ಏನು ಕೊಡೋಣ" ಎಂದು ಸಮಾಲೋಚಿಸಿದಾಗ ಕರ್ಕಶೆಯು ಸಿಟ್ಟುಗೊಂಡು ಮನೆಯ ಅಲಂಕಾರವಸ್ತುಗಳನ್ನೆಲ್ಲ ತೆಗೆದು ಪೆಟ್ಟಿಗೆಯಲ್ಲಿ ಭದ್ರಪಡಿಸಿ ಗಂಡನನ್ನು ಕುರಿತು "ಮನೆಯಲ್ಲಿದ್ದರೆ ನೋಡಿರಿ. ಏನೂ ಹಣವಿಲ್ಲ" ಎಂದು ಹೇಳಿ, ವಧೂವರರಿಗೆ ತಿಂದುಳಿದ ಹಿಟ್ಟಿನಿಂದ ಬುತ್ತಿಕಟ್ಟಿಕೊಟ್ಟು, ತಮ್ಮ ಮನೆಗೆ ತೆರಳುವಂತೆ ತಿಳಿಸಿದಳು. ಆ ಮಾತನ್ನು ಕೇಳಿ ಸುಮಂತುವು ಮನದಲ್ಲೇ ನೊಂದವನಾಗಿ ತನ್ನ ದುಃಖವನ್ನು ಸ್ಥಿರವಾದ ಮನಸ್ಸಿನಲ್ಲೇ ಅಡಗಿಸಿಕೊಂಡನು. ಕೌಂಡಿನ್ಯನಾದರೋ ಶೀಲವತಿಯಾದ, ನವವಧುವಾದ, ಶೀಲೆಯೊಡಗೂಡಿ ತನ್ನ ಶಿಷ್ಯರ ಸಮೇತ ಯಮುನಾ ನದಿಯನ್ನು ದಾಟಿದನು. ನದಿಯ ದಡದಲ್ಲಿ ತಾನು ಬಂದಿದ್ದ ಬಂಡಿಯ ರಕ್ಷಣೆಗಾಗಿ ತನ್ನ ಶಿಷ್ಯರನ್ನು ನಿಲ್ಲಿಸಿ, ಮಾಧ್ಯಾಹ್ನಿಕ ಸ್ನಾನಸಂಧ್ಯಾವಂದನಾದಿವಿಧಿಯನ್ನು ನಡೆಸಲಿಕ್ಕಾಗಿ ನದಿಗೆ ಹೊರಟನು.

ಕೌಂಡಿನ್ಯನು ನದೀಮುಖನಾಗಿ ಹೊರಟ ಆ ಮಧ್ಯಾಹ್ನದಲ್ಲಿ, ಭೋಜನ ಸಮಯದಲ್ಲಿ, ಆ ನದೀದಡದಲ್ಲಿ ಚತುರ್ದಶೀ ದಿನವಾದ ಅಂದು ಶ್ರೀಮನ್ನಾರಾಯಣದೇವರನ್ನು ಭಕ್ತಿಯಿಂದ ಪೂಜಿಸುತ್ತಿರುವ ರಕ್ತವಸ್ತ್ರಧಾರಿಣಿಯರಾದ ಸ್ತ್ರೀಸಮೂಹವನ್ನು ಕಂಡ ಶೀಲೆಯು ಆ ಸ್ತ್ರೀಸಮೂಹವನ್ನು ಕುರಿತು "ಎಲೈ ಆರ್ಯಮಹಿಳೆಯರೇ! ನೀವು ಮಾಡುತ್ತಿರುವ ವ್ರತವೆಂತಹುದೆಂಬುದನ್ನು ದಯಮಾಡಿ ನನಗೂ ತಿಳಿಸಿರಿ" ಎಂಬುದಾಗಿ ಕೋರಿದಳು. ಆಗ ಸ್ತ್ರೀಯರು ಶೀಲವತಿಯಾದ ಶೀಲೆಯನ್ನು ಕುರಿತು "ಬಾಲೆಯೇ! ಈ ವ್ರತಕ್ಕೆ 'ಅನಂತವ್ರತ'ವೆನ್ನುವರು. ಈ ವ್ರತದಲ್ಲಿ ಅನಂತನು ಪೂಜಿಸಲ್ಪಡುತ್ತಾನೆ" ಎನ್ನಲು, ಆ ಶೀಲೆಯು "ಈ ಉತ್ತಮವಾದ ಪೂಜೆಯನ್ನು ನಾನೂ ಮಾಡುತ್ತೇನೆ ಈ ವ್ರತವನ್ನು ವಿಧಿವತ್ತಾಗಿ ಆಚರಿಸುವ ಕ್ರಮವನ್ನೂ ಕೊಡಬೇಕಾದ ದಾನವನ್ನೂ ವಿವರವಾಗಿ ತಿಳಿಸಿರಿ" ಎಂದು ಕೇಳಿದಳು.

ಆಗ ಆ ಹೆಂಗಸರು, "ಎಲೈ ಶೀಲೆಯೇ! ಈ ವ್ರತವನ್ನು ಮಾಡುವ ಕ್ರಮವನ್ನು ಹೇಳುತ್ತೇವೆ ಕೇಳು. ಒಂದು ಸೇರು ಅಕ್ಕಿಯಿಂದ ಪುರುಷ ನಾಮಕನಾದ ಪರಮಾತ್ಮನ ನಿಮಿತ್ತದಿಂದ ಪಾಕಮಾಡಿ ಅನಂತನಿಗರ್ಪಿಸಿ ಅರ್ಧವನ್ನು ಬ್ರಾಹ್ಮಣನಿಗೆ ದಾನಮಾಡಿ ಉಳಿದರ್ಧವನ್ನು ತಾನು ಭೋಜನ ಮಾಡಬೇಕು. ಬ್ರಾಹ್ಮಣರಿಗೆ ಯಥಾಶಕ್ತಿ ದಕ್ಷಿಣೆಯನ್ನು ಕೊಡಬೇಕು. ನದಿಯಲ್ಲಿ ಸ್ನಾನಮಾಡಿ ನದೀದಡದಲ್ಲಿ ದರ್ಭೆಯಿಂದ ಶೇಷನ ಪ್ರತಿಮೆಯನ್ನು ಮಾಡಿ, ಬಿದಿರಿನ ಪಾತ್ರೆಯಲ್ಲಿಟ್ಟು ಮಂಡಲದ ಮೇಲೆ ಗಂಧ-ಪುಷ್ಪ-ಧೂಪ-ದೀಪಗಳಿಂದ ಅನೇಕ ವಿಧ ಪಕ್ವಾನ್ನಗಳಿಂದೊಡಗೂಡಿದ ನೈವೇದ್ಯಗಳಿಂದ ಆ ದೇವನ ಮುಂಭಾಗದಲ್ಲಿ ಕುಂಕುಮದಿಂದ ಕೆಂಪಾದ ದೃಢವಾದ ಹದಿನಾಲ್ಕು ಗಂಟುಳ್ಳ ದೋರವನ್ನಿಟ್ಟು ಗಂಧಪುಷ್ಪಾದಿ ಶುಭದ್ರವ್ಯಾದಿಗಳಿಂದ ಶ್ರೀಮದನಂತದೇವನನ್ನು ಪೂಜಿಸಬೇಕು. ಆಮೇಲೆ 'ಎಲೈ ಅನಂತನೇ! ವಾಸುದೇವನೇ! ಸಂಸಾರವೆಂಬ ಮಹಾಸಮುದ್ರದಲ್ಲಿ ಮುಳುಗಿದ ನನ್ನನ್ನು ಉದ್ಧರಿಸು. ನಾಶವಿಲ್ಲದ ನಿನ್ನ ರೂಪದಲ್ಲಿ ನನ್ನನ್ನು ವಿನಿಯೋಗಿಸು. ಅನಂತರೂಪಿಯಾದ ನೀನು ಈ ದೋರದಲ್ಲಿ ಸನ್ನಿಹಿತನಾಗಿರುವೆ. ನಿನಗೆ ನಮಸ್ಕಾರವು, ನಮಸ್ಕಾರವು" ಎಂದು ಹೇಳಿ

ಗಂಡಸರು ಬಲಗೈಯಲ್ಲಿಯೂ, ಹೆಂಗಸರು ಎಡಗೈಗೆ ಮುಟ್ಟಿಸಿ ಬಲಗೈಗೆ ದಾರವನ್ನು ಕಟ್ಟಿಕೊಳ್ಳಬೇಕು. ಆಮೇಲೆ ಅನಂತನ ಕಥೆಯನ್ನು ಕೇಳಿ ಪ್ರಸಾದವನ್ನು ಸ್ವೀಕರಿಸಿ ಶ್ರೀಮನ್ನಾರಾಯಣರೂಪಿಯಾದ ಅನಂತಪದ್ಮನಾಭನನ್ನು ಧ್ಯಾನಿಸುತ್ತ ಮನೆಗೆ ತೆರಳಬೇಕು. ಎಲೈ ಕಲ್ಯಾಣಿಯೇ! ಇದು ಅನಂತವ್ರತವನ್ನು ಮಾಡುವ ಕ್ರಮವು ಎಂದು ಹೇಳಿದರು.

ಶ್ರೀಕೃಷ್ಣನು ಧರ್ಮರಾಜನನ್ನು ಕುರಿತು, "ಎಲೈ ಧರ್ಮರಾಜನೆ! ಈ ಕಥೆಯನ್ನು ಕೇಳಿ ಸಂತುಷ್ಟಳಾದ ಶೀಲೆಯು ತಾನೂ ಆ ವ್ರತವನ್ನು ಆಚರಿಸಿ ದೋರವನ್ನು ಕಟ್ಟಿಕೊಂಡು ತಾನು ತಂದಿದ್ದ ಬುತ್ತಿಯಲ್ಲಿ ಅರ್ಧವನ್ನು ಬ್ರಾಹ್ಮಣನಿಗೆ ಕೊಟ್ಟು ನಂತರ ತಾನೂ ಭುಂಜಿಸಿ ಪತಿಯೊಡನೆ ಗೃಹಾಭಿಮುಖವಾಗಿ ಹೊರಟಳು. ಅನಂತವ್ರತದ ಮಹಿಮೆಯಿಂದ ಆ ಕೌಂಡಿನ್ಯನ ಆಶ್ರಮವು ಗೋಸಂಪತ್ತಿನಿಂದಲೂ ಧನಕನಕವಸ್ತುಗಳಿಂದ ತುಂಬಿ ನಿತ್ಯವೂ ಅತಿಥಿಸತ್ಕಾರಗಳಿಂದ ಶೋಭಿಸುತ್ತಿದ್ದಿತು. ಹೀಗಿರಲಾಗಿ ವಸ್ತ್ರಾಭರಣಗಳಿಂದ ಅಲಂಕೃತಳಾಗಿ ಸಾವಿತ್ರೀದೇವಿಯಂತೆ ಓಡಾಡುತ್ತಿದ್ದ ಆ ಶೀಲೆಯು ತೋಳಿನಲ್ಲಿ ದೋರವನ್ನು ಧರಿಸಿದ್ದುದು ಕೌಂಡಿನ್ಯನಿಗೆ ಗೋಚರಿಸಿತು. ಆಗ ಆತನು 'ಎಲೈ ಶೀಲೆಯೇ! ನೀನು ತೋಳಿನಲ್ಲಿ ಈ ದೋರವನ್ನು ಧರಿಸಿರುವ ಕಾರಣವಾದರೂ ಏನು? ನನ್ನನ್ನು ವಶೀಕರಿಸಿಕೊಳ್ಳಲಿಕ್ಕಾಗಿ-ಯಲ್ಲವಷ್ಟೇ? ಸತ್ಯವನ್ನು ಹೇಳು' ಎನ್ನಲು ಶೀಲೆಯು 'ಪ್ರಿಯನೇ! ಯಾವ ದೇವನ ಅನುಗ್ರಹದಿಂದ ಈ ಸಮಸ್ತಸಂಪತ್ತನ್ನೂ ಅನುಭವಿಸುತ್ತಿರುವೆವೋ ಅಂತಹ ಅನಂತಪದ್ಮನಾಭನ ಸನ್ನಿಧಾನವುಳ್ಳ ಈ ದೋರವನ್ನು ನಾನು ಕಟ್ಟಿಕೊಂಡಿರುವೆನು' ಎಂದು ಹೇಳಿದಳು. ಶೀಲೆಯ ಮಾತನ್ನು ಕೇಳಿ, ಸಂಪನ್ಮದದಿಂದ ಅಂಧನಾದ ಕೌಂಡಿನ್ಯನು ಅನಂತನನ್ನು ತಿರಸ್ಕರಿಸುತ್ತಾ ಆ ದೋರವನ್ನು ಆಕೆಯ ಕೈಯಿಂದ ಕಿತ್ತು ಜ್ವಲಿಸುವ ಅಗ್ನಿಯಲ್ಲಿ ಬಿಸುಟನು. ಅದನ್ನು ಕಂಡ ಶೀಲೆಯು ತಕ್ಷಣವೇ ಆ ದೋರವನ್ನೆತ್ತಿ ಹಾಲಿನಲ್ಲಿ ಹಾಕಿದಳು. ಈ ದುಷ್ಕರ್ಮಪರಿಪಾಕದಿಂದ ಕೌಂಡಿನ್ಯನ ಸಂಪತ್ತೆಲ್ಲವೂ ನಾಶಹೊಂದಿತು. ಗೋವುಗಳನ್ನು ಕಳ್ಳರು ಅಪಹರಿಸಿದರು; ಮನೆಯು ಸುಟ್ಟುಹೋಯಿತು. ಹೆಚ್ಚೇನು! ಬಂದ ಸಂಪತ್ತೆಲ್ಲವೂ ಹಾಗೆಯೇ ಹೋಯಿತಲ್ಲದೆ ಆಪ್ತರಲ್ಲಿಯೂ ಜಗಳವಾಡುವಂತಾಗಿ ಅನಂತನ ತಿರಸ್ಕಾರ-ದೋಷದಿಂದ ದಾರಿದ್ರ್ಯವು ಪ್ರಾಪ್ತವಾಯಿತು. ಆಗ ಕೌಂಡಿನ್ಯನು ವ್ಯಸನಾಕ್ರಾಂತನಾಗಿ ಭಾರ್ಯೆಯನ್ನು ಕುರಿತು 'ಎಲೌ ಶೀಲೆ! ನಮ್ಮ ಈ ದುಸ್ಥಿತಿಗೆ ಕಾರಣವಾದರೂ ಏನು? ಈ ದುಃಖದಿಂದ ಪಾರಾಗುವ ಮಾರ್ಗವಾದರೂ ಏನು? ಎಂದು ಪ್ರಶ್ನಿಸಿದನು. ಆಗ ಶೀಲಭೂಷಣೆಯಾದ ಆ ಶೀಲೆಯು 'ಎಲೈ ಮಹಾಭಾಗನೇ! ಪ್ರಾಯಶಃ ಅನಂತನನ್ನು ಧಿಕ್ಕರಿಸಿದ ಪಾಪದ ಫಲವೇ ಇದಾಗಿರಬೇಕಾದ ಕಾರಣ ಆ ಅನಂತನ ಅನುಗ್ರಹವನ್ನು ಹೊಂದಲು ಪ್ರಯತ್ನಿಸಿರಿ' ಎಂದು ತನ್ನ ಅಭಿಪ್ರಾಯವನ್ನು ಸೂಚಿಸಿದಳು.

"ಸತಿಯ ಸಲಹೆಯಿಂದ ಸಂತುಷ್ಟನಾದ ಆ ಕೌಂಡಿನ್ಯ ಮುನಿಯು ಅನಂತನನ್ನು ಮನದಲ್ಲೇ ಸ್ಮರಿಸಿ, ನಿಯಮವನ್ನು ಪರಿಗ್ರಹಿಸಿ, ಗಾಳಿಯಿಂದ ಮಾತ್ರವೇ ತನ್ನ ಆಹಾರವನ್ನು ಕಲ್ಪಿಸುತ್ತಾ, 'ಆ ಸ್ವಾಮಿಯಾದ ಅನಂತನನ್ನು ಎಲ್ಲಿ ಕಾಣುವೆನು? ಆತನ ಅನುಗ್ರಹದ

ಫಲವಾದ ಸಂಪತ್ತೆಲ್ಲವೂ ಆತನ ತಿರಸ್ಕಾರದ ಫಲವಾಗಿ ನಾಶವಾಯಿತು' ಎಂದು ಮನದಲ್ಲೇ ಚಿಂತಿಸುತ್ತಾ ಆತನ ಅನುಗ್ರಹವನ್ನು ಪಡೆಯಬೇಕೆಂದು ನಿರ್ಧರಿಸಿ ಅರಣ್ಯಕ್ಕೆ ಹೊರಟನು. ಆ ಘೋರಾರಣ್ಯದಲ್ಲಿ ಫಲಪುಷ್ಪಭರಿತವಾದ ಮಾವಿನಮರವೊಂದನ್ನು ಕಂಡು 'ಎಲೈ ಮಹಾವೃಕ್ಷವೇ! ಎಲ್ಲಿಯಾದರೂ ಅನಂತನನ್ನು ಕಂಡಿರುವೆಯಾ? ದಯವಿಟ್ಟು ತಿಳಿಸಿ ನನ್ನ ದುಃಖವನ್ನು ಪರಿಹರಿಸು' ಎನ್ನಲಾಗಿ ಆ ವೃಕ್ಷವು ತಾನೆಂದೂ ಅನಂತನನ್ನು ನೋಡಲಿಲ್ಲವೆಂದು ತಿಳಿಸಲು ಆ ಮುನಿಯು ದುಃಖದಿಂದ ಮುಂದೆ ಹೊರಟನು. ಅನಂತನನ್ನು ಎಲ್ಲಿ ಕಂಡೇನೆಂದು ಚಿಂತಿಸುತ್ತಾ ನಡೆಯುತ್ತಿದ್ದ ಆ ಮುನಿಗೆ ಓಡಾಡುತ್ತಿದ್ದ ಗೋವೊಂದು ಗೋಚರಿಸಿತು. ಆ ಗೋವನ್ನು ಕಂಡ ಕೌಂಡಿನ್ಯನು 'ಎಲೈ ವೃಷಭನೇ! ನೀನು ಅನಂತಸ್ವಾಮಿಯನ್ನು ಕಂಡಿರುವೆಯಾ!' ಎನ್ನಲಾಗಿ ಆ ವೃಷಭವೂ ಸಹ ತಾನು ಅನಂತಸ್ವಾಮಿಯನ್ನು ಕಾಣೆನೆಂದು ಅರುಹಿತು. ಅಲ್ಲಿಂದ ಮುಂದೆ ಹೊರಟ ಕೌಂಡಿನ್ಯನು ತಾವರೆಗಳಿಂದಲೂ ಪಕ್ಷಿಗಳಿಂದಲೂ ಕೂಡಿ ಜಲಭರಿತವಾದ ತಟಾಕಗಳೆರಡನ್ನು ಕಂಡನು. ಕೌಂಡಿನ್ಯನು ತಟಾಕಾಭಿಮಾನಿ ದೇವತೆಯನ್ನು ಕುರಿತು 'ನೀವಾದರೂ ಅನಂತಸ್ವಾಮಿಯನ್ನು ಕಂಡಿರುವಿರಾ ಎನ್ನಲು ನಾವು ಅನಂತಸ್ವಾಮಿಯನ್ನು ಕಾಣೆವು ಎಂದು ಹೇಳಿದುವು. ಅನಂತರ ಎದುರಿಗೆ ಕಂಡ ಕತ್ತೆ ಹಾಗೂ ಆನೆಗಳಿಂದಲೂ ಅದೇ ಉತ್ತರವನ್ನು ಹೊಂದಿದ ಆ ಮುನಿಯು ಅನಂತ ದರ್ಶನವಾಗುವುದೋ ಇಲ್ಲವೋ ಎಂದು ಕಳವಳದಿಂದ ನಿರಾಶೆಹೊಂದಿ ಜೀವನದಲ್ಲಿ ಜಿಗುಪ್ಸಿತನಾಗಿ ಪ್ರಾಣತ್ಯಾಗ ಮಾಡಲು ಸಂಕಲ್ಪಿಸಿ ಮರಕ್ಕೆ ಕಟ್ಟಿದ ಹಗ್ಗವನ್ನು ತನ್ನ ಕುತ್ತಿಗೆಗೆ ಕಟ್ಟಲು ಯತ್ನಿಸಿದನು. ಆಗ ಭಕ್ತವತ್ಸಲನಾದ ಅನಂತನು ವೃದ್ಧಬ್ರಾಹ್ಮಣರೂಪದಿಂದ ಆತನಿಗೆ ದರ್ಶನವಿತ್ತು ಆತನನ್ನು ಬಲಗೈಯಲ್ಲಿ ಹಿಡಿದುಕೊಂಡು ಗುಹೆಯಲ್ಲಿ ಪ್ರವೇಶಮಾಡಿ ದೇವತಾ ಸ್ತ್ರೀಪುರುಷರಿಂದ ಶೋಭಿತವಾದ ತನ್ನ ಪಟ್ಟಣವನ್ನು ತೋರಿಸಿದನು.

ಆ ಪಟ್ಟಣದಲ್ಲಿ ದಿವ್ಯವಾದ ಉತ್ತಮಸಿಂಹಾಸನದಲ್ಲಿ ಶೋಭಿಸುತ್ತಿದ್ದ ತನ್ನನ್ನೂ ತೋರಿಸಿದನು. ಪಾರ್ಶ್ವಗಳಲ್ಲಿ ಶಂಖಚಕ್ರಪದ್ಮಗದೆಗಳಿಂದಲೂ ಗರುಡ ಇತ್ಯಾದಿಗಳಿಂದ ಶೋಭಿತವಾದ ಅನಂತಗಳಾದ ತನ್ನ ವಿಭೂತಿರೂಪ ರೇಖೆಗಳಿಂದ ಶೋಭಿತವಾದ ಅನಂತಗಳಾದ ಮಹಾತೇಜಸ್ಸಿನಿಂದ ಕೂಡಿದ ವ್ಯಾಪ್ತ ಸ್ವರೂಪವನ್ನು ಆ ಬ್ರಾಹ್ಮಣನಿಗಾಗಿ ತೋರಿಸಿದನು. ಕೌಸ್ತುಭರತ್ನದಿಂದ ಕಂಗೊಳಿಸುವ ವನಮಾಲೆಯಿಂದಲಂಕೃತನಾದ, ದೇವತೆಗಳಿಗೂ ದೇವತೆಯಾದ ಬ್ರಹ್ಮಾದಿಗಳಿಗೆ ಸ್ವಾಮಿಯಾದ ಯಾರಿಂದಲೂ ಪರಾಜಿತನಾಗದ ಆ ಅನಂತಸ್ವಾಮಿಯನ್ನು ಕಂಡ ಕೌಂಡಿನ್ಯನು ಗಟ್ಟಿಯಾಗಿ ಜಯಜಯಕಾರ ಮಾಡುತ್ತಾ 'ನಾನು ಪಾಪಿಯು, ಪಾಪಕರ್ಮಗಳುಳ್ಳವನು, ಪಾಪಬುದ್ಧಿಯುಳ್ಳವನು, ಪಾಪದಿಂದಲೇ ಜನಿಸಿದವನು. ಕಮಲದಳದಂತೆ ವಿಶಾಲವಾದ ನೇತ್ರವುಳ್ಳ ಪರಮಾತ್ಮನೇ! ನನ್ನನ್ನು ರಕ್ಷಿಸು, ಸಮಸ್ತ ಪಾಪಗಳನ್ನು ಪರಿಹರಿಸು. ಈ ದಿನ ನನ್ನ ಜನ್ಮವು ಪಾವನವಾಯಿತು; ಯಾವ ಕಾರಣದಿಂದ ನಿನ್ನ ಚರಣಕಮಲಗಳಲ್ಲಿ ನನ್ನ ಶಿರಸ್ಸು ದುಂಬಿಯಂತೆ ಆಚರಿಸುವುದೋ ಆ ನನ್ನ ಜೀವನವೂ ಇಂದು ಸಫಲವಾಯಿತು' ಎಂದನು.

"ಆಗ ಅನಂತಸ್ವಾಮಿಯು ಸುಮಧುರವಚನದಿಂದ 'ಎಲೈ ಬ್ರಾಹ್ಮಣಶ್ರೇಷ್ಠನೇ! ಹೆದರಬೇಡ. ನಿನ್ನ ಮನಸ್ಸಿನಲ್ಲಿರುವುದನ್ನು ತಿಳಿಸು' ಎಂದನು. ಆಗ ಕೌಂಡಿನ್ಯನು 'ಎಲಾ ಅನಂತಸ್ವಾಮಿಯೇ! ಐಶ್ವರ್ಯಮದದಿಂದ ನಾನು ನಿನ್ನ ಅನಂತನಾಮಕ ದೋರವನ್ನು ಕಡಿದು ಬಿಸುಟೆನು. ಆ ದುಷ್ಕರ್ಮದ ಪರಿಣಾಮವಾಗಿ ನನ್ನ ಸಂಪತ್ತೆಲ್ಲವೂ ನಾಶವಾಯಿತು. ಬಂಧುಗಳಲ್ಲಿ ನಿತ್ಯ ಜಗಳವಾಯಿತು. ಯಾರೂ ಮಾತನಾಡಿಸದಾದರು. ಆ ದುಃಖದಲ್ಲಿ ನನಗೆ ನೀನಲ್ಲದೆ ಅನ್ಯರು ಇಲ್ಲವೆಂದು ನಿನ್ನ ದರ್ಶನಾಕಾಂಕ್ಷಿಯಾಗಿ ಅರಣ್ಯವನ್ನು ಸೇರಿದಾಗ ದರ್ಶನವಿತ್ತು ನಿನ್ನ ಸ್ವರೂಪವನ್ನು ತೋರಿಸಿದ ದಯಾಮಯಿಯೇ! ಆ ನಿನ್ನ ತಿರಸ್ಕಾರರೂಪ ಪಾಪಕ್ಕೆ ಪರಿಹಾರವನ್ನು ದಯಮಾಡಿ ತಿಳಿಸು ಎಂದು ಆರ್ತನಾಗಿ ಕೇಳಿಕೊಂಡನು ಆಗ ಅನಂತಸ್ವಾಮಿಯು 'ಎಲೈ ಕೌಂಡಿನ್ಯನೇ! ನೀನು ಮನೆಗೆ ಹೋಗು. ವಿಳಂಬ ಮಾಡಬೇಡ. ಹದಿನಾಲ್ಕು ವರ್ಷಕಾಲ ಅನಂತವ್ರತವನ್ನು ಭಕ್ತಿಯಿಂದ ಆಚರಿಸು. ನೀನು ಸಕಲ ಪಾಪವಿಮುಕ್ತನಾಗಿ ಪರಿಶುದ್ಧಸ್ವರೂಪನಾಗಿ ಉತ್ತಮವಾದ ಸಿದ್ಧಿಯನ್ನು ಹೊಂದುವೆ. ಇದಲ್ಲದೆ ಸಕಲರಿಗೂ ಉಪಯೋಗಿಯಾದ ಬೇರೊಂದು ವರವನ್ನೂ ಕೊಡುತ್ತೇನೆ. ಶೀಲೆಯಿಂದ ಆಚರಿಸಲ್ಪಟ್ಟ ಈ ಉತ್ತಮವಾದ ಅನಂತವ್ರತವನ್ನಾಚರಿಸಿ ಕಥೆಯನ್ನು ಯಾರು ಕೇಳುತ್ತಾರೋ ಅಂತಹವರು ಪಾಪರಹಿತರಾಗಿ ಸದ್ಗತಿಯನ್ನು ಹೊಂದುತ್ತಾರೆ. ವಿಪ್ರನೇ! ನೀನು ಬಂದ ಮಾರ್ಗವಾಗಿಯೇ ಶೀಘ್ರವಾಗಿ ಮನೆಗೆ ಹಿಂತಿರುಗು' ಎಂದು ಆಜ್ಞಾಪಿಸಿದನು.

"ಆಗ ಕೌಂಡಿನ್ಯನು ತಾನು ಆ ಅರಣ್ಯದಲ್ಲಿ ಕಂಡ ಆ ಮಾವಿನಮರ ಯಾವುದು? ಆ ಗೋವು, ವೃಷಭ, ಸರೋವರದ್ವಯ, ಕತ್ತೆ, ಆನೆ ಇವುಗಳು ಯಾರೆಂದು ತಿಳಿಸಬೇಕೆಂದು ಬೇಡಿಕೊಳ್ಳಲು, ಪರಮಾತ್ಮನು ವೇದವಿದ್ಯಾಪಾರಂಗತನಾದ ಬ್ರಾಹ್ಮಣನೋರ್ವನು ಶಿಷ್ಯರಿಗೆ ವಿದ್ಯಾದಾನ ಮಾಡದ ಕಾರಣ ಆ ಮಾವಿನಮರವಾಗಿ ಜನಿಸಿರುವನೆಂದು ತಿಳಿಸಿದನು. ನೀನು ಕಂಡ ಆ ಗೋವು ಪೂರ್ವದಲ್ಲಿ ಸರ್ವಬೀಜಗಳನ್ನೂ ತನ್ನಲ್ಲಿ ಅಡಗಿಸಿಕೊಂಡ ಊಸರಕ್ಷೇತ್ರವು (ಬಂಜರು ಭೂಮಿ). ಎಳೆಹುಲ್ಲಿನ ಸ್ಥಳದಲ್ಲಿ ಕಂಡ ಆ ವೃಷಭವೇ ಸಾಕ್ಷಾದ್ಧರ್ಮದೇವತೆಯು. ಆ ತಟಾಕದ್ವಯಗಳೇ ಧರ್ಮಾಧರ್ಮ ವ್ಯವಸ್ಥೆಯು. ಆ ವ್ಯವಸ್ಥೆಗಳೆರಡೂ ಬ್ರಾಹ್ಮಣ ಸೋದರಿಯರಾಗಿ ಹುಟ್ಟಿ, ಬೇಡಿದವರಿಗೆ ಭಿಕ್ಷೆ ಕೊಡದೆ ದಾನಾದಿವಸ್ತುಗಳನ್ನು ಅತಿಥಿಗಳಿಗಾಗಲೀ - ದುರ್ಬಲರಿಗಾಗಲೀ ಕೊಡದೆ, ಪರಸ್ಪರ ಅಲೆಗಳಿಂದ ತಾವೇ ಅಲಂಕರಿಸಲ್ಪಟ್ಟವರು. ಆ ಕತ್ತೆಯೇ ಕೋಪವು. ಆ ಆನೆಯೇ ಮದವೆಂಬ ದೋಷವು. ಆ ವೃದ್ಧಬ್ರಾಹ್ಮಣನಾದರೋ ಸಾಕ್ಷಾತ್ ಅನಂತನಾದ ನಾನೇ. ಆ ಗುಹೆಯಾದರೋ ಸಂಸಾರವೆಂಬ ಗುಹೆಯು ಎಂದು ಹೇಳಿ ಅಂತರ್ಧಾನನಾದನು.

ಎಲ್ಲವನ್ನೂ ಸ್ವಪ್ನದಂತೆ ಕಂಡ ಆ ಕೌಂಡಿನ್ಯನು ಹದಿನಾಲ್ಕು ವರ್ಷಗಳ ಕಾಲ ಅನಂತವ್ರತವನ್ನಾಚರಿಸಿ ಸರ್ವಭೋಗಗಳನ್ನೂ ಅನುಭವಿಸುತ್ತಾ ಅನಂತನಾಮ ಸ್ಮರಣೆಯಲ್ಲಿಯೇ ಅನಂತನ ಪಟ್ಟಣವನ್ನು ಪ್ರವೇಶಿಸಿದನು.

ಎಲೈ ರಾಜರ್ಷಿಯೇ! ನೀನೂ ಸಹ ಆ ಬ್ರಾಹ್ಮಣನಂತೆಯೇ ವ್ರತವನ್ನು ಆಚರಿಸಿ ಕಥಾಶ್ರವಣಪುರಸ್ಸರ ಭಕ್ತಿಯಿಂದ ಒಂದು ವರ್ಷದ ವ್ರತದಿಂದ ಪಡೆಯಬಹುದು. ಈ

ಕಥೆಯನ್ನು ಹೇಳುವವರೂ, ಕೇಳುವವರೂ ಸರ್ವಪಾಪರಹಿತರಾಗಿ ವಿಷ್ಣುಲೋಕವನ್ನು ಸೇರುವರು.

"ಎಲೈ ಯುಧಿಷ್ಠಿರನೇ! ವ್ರತಗಳಲ್ಲೇ ಅತ್ಯುತ್ತಮವಾದ ಈ 'ಅನಂತವ್ರತ'ವನ್ನು ನಿನಗೆ ತಿಳಿಸಿದ್ದೇನೆ. ಸಂಸಾರವೆಂಬ ಭಯಂಕರಗುಹೆಗಳಲ್ಲಿ ಸುಖವಾಗಿ ಕ್ರೀಡಿಸಬಯಸುವವರು ತ್ರಿಲೋಕಾಧಿಪತಿಯಾದ ಅನಂತನನ್ನು ಭಕ್ತಿಯಿಂದ ಪೂಜಿಸಿ ಉತ್ತಮ ದೋರವನ್ನು ಬಲದ ತೋಳಲ್ಲಿ ಕಟ್ಟಿಕೊಳ್ಳುತ್ತಾರೆ" ಎಂದು ಶ್ರೀಕೃಷ್ಣನು ಹೇಳಿದನು.

॥ ಇತಿ ಶ್ರೀಅನಂತಚತುರ್ದಶೀವ್ರತಕಥಾ ಸಂಪೂರ್ಣಾ ॥

॥ ಶ್ರೀಕೃಷ್ಣಾರ್ಪಣಮಸ್ತು ॥